ಏಪ್ರಿಲ್– ಜೂನ್–2019 ಬೆಲೆ: ರೂ 20. ಸಂಪುಟ : 1 ಸಂಚಿಕೆ : 2

# ಕೃಷಿವನ

ತ್ರೈ ಮಾಸಿಕ ವಾರ್ತಾಪತ್ರ

ಖಾಸಗಿ ಪ್ರಸಾರಕ್ಕಾಗಿ

# KRUSHI VANA

April - June 2019 Price: Rs.20.00

Quarterly *news* letter



# ಕೃಷಿ–ಅರಣ್ಯವನ್ನು ರೈತರ ನಡುವೆ ಜನಪ್ರಿಯಗೊಳಿಸುವ ಬಗ್ಗೆ



ಕೃಷಿ-ಅರಣ್ಯ ಪದ್ಧತಿಯು, ಹೆಸರೇ ಸೂಚಿಸುವಂತೆ **ಬೇಸಾಯಭೂಮಿಯಲ್ಲಿ** ಅರಣ್ಯವನ್ನು ಅಭಿವೃದ್ಧಿಪಡಿಸುವುದನ್ನು ಧ್ವನಿಸುತ್ತದೆ. ಕೃಷಿ-ಅರಣ್ಯವು ಬೇಸಾಯ ಭೂಮಿಯಲ್ಲಿ ಬಹುಕಾಲ ಬೆಳೆಯುವ ಮರಗಳ ಪ್ರಬೇಧಗಳನ್ನು ಬೆಳೆಸುವುದಕ್ಕೆ ಸಂಬಂಧಿಸಿದ, ಅನಾದಿ ಕಾಲದಿಂದಲೂ ಪಾಲಿಸಿಕೊಂಡು ಬಂದಿರುವ ಪುರಾತನ ಪದ್ಧತಿ. **ಬೇಸಾಯಭೂಮಿಯಲ್ಲಿ** ನೆಟ್ಟು ಬೆಳಸುವ ಇಂಥ ಮರಗಳು ಸಾಮಾನ್ಯವಾಗಿ ಹಣ್ಣು, ಮೇವು, ಉರುವಲು, ಗೋಂದು, ರಾಳ, ಹೂಗಳು, ಗೊಬ್ಬರ, ನಾರು, ಔಷಧ ಇತ್ಯಾದಿ ಹಲವು ಉದ್ದೇಶಗಳನ್ನು ಈಡೇರಿಸುವ ಪ್ರಬೇಧಗಳಾಗಿವೆ. ಇಲ್ಲಿನ ಬಹುತೇಕ ಮರಗಳು ಪ್ರಧಾನವಾಗಿ ತೋಟಗಾರಿಕೆ ಬೆಳೆಗಳಿಗೆ ಸಂಬಂಧಿಸಿದಂಥವು. ಇತ್ತೀಚಿನ ದಿನಗಳಲ್ಲಿ, ರಾಜ್ಯಾದ್ಯಂತ ಕೃಷಿ ಅರಣ್ಯವನ್ನು ವೃದ್ಧಿಸಲು ಅನೇಕ ಕಾರಣಗಳಿಗಾಗಿ ಹೆಚ್ಚಿನ ಒತ್ತು ನೀಡಲಾಗುತ್ತಿದೆ.

ಮರಗಳ ಹೊದಿಕೆಯನ್ನು ಹೆಚ್ಚಿಸಲು ಕೃಷಿ-ಅರಣ್ಯ ಪದ್ಧತಿಯು ಒಂದು ಕಾರ್ಯಸಾಧ್ಯ ವ್ಯವಸ್ಥೆ. ದೇಶದ ಒಟ್ಟು ಭೌಗೋಳಿಕ ಪ್ರದೇಶದಲ್ಲಿ ಸರ್ಕಾರಕ್ಕೆ ಸೇರಿದ ಅರಣ್ಯ ಪ್ರದೇಶ ಶೇ. 20ರಷ್ಟಿದೆ. ಆದರೆ ದೇಶದ ಒಟ್ಟು ಭೌಗೋಳಿಕ ಪ್ರದೇಶದ ಶೇ. 33 ರಷ್ಟು ಪ್ರದೇಶ ಅರಣ್ಯ ಮತ್ತು ಮರಗಳ ಹೊದಿಕೆಯ ವ್ಯಾಪ್ತಿಯಲ್ಲಿರಬೇಕೆಂಬ ರಾಷ್ಟ್ರೀಯ ನೀತಿಯ ಗುರಿಯನ್ನು ಕೃಷಿ ಅರಣ್ಯದ ಮೂಲಕ ಮಾತ್ರ ಸಾಧಿಸಲು ಸಾಧ್ಯ. ಫಲವತ್ತತೆಯಲ್ಲಿ ಕೊರತೆಯಿರುವ ಬೇಸಾಯ ಭೂಮಿಯು ಕೃಷಿ ಬೆಳೆಗಳಿಗಿಂತ ಮರಗಳ ಬೆಳೆಗಳಿಗೆ ಸೂಕ್ತವಾಗಿ ಸ್ಪಂದಿಸುತ್ತದೆ. ಕೃಷಿ-ಅರಣ್ಯ ಪದ್ಧತಿಯು ಮಣ್ಣಿನ ಫಲವತ್ತತೆಯನ್ನು ಮತ್ತು ತೇವಾಂಶ ಲಭ್ಯತೆಯನ್ನು ಹೆಚ್ಚಿಸುತ್ತದೆ. ಅಲ್ಲದೆ, ಕೃಷಿ-ಅರಣ್ಯವು ರೈತರಿಗೆ ಹೆಚ್ಚುವರಿ ಆದಾಯವನ್ನೂ ಗಳಿಸಿಕೊಡುತ್ತದೆ. ಉರುವಲು ಮತ್ತು ಚೌಬೀನೆಗಾಗಿ ರೈತರು ಅರಣ್ಯಗಳನ್ನು ಅವಲಂಬಿಸುವ ಪ್ರಮಾಣ ಕಡಿಮೆಯಾಗುತ್ತದೆ ಅಥವಾ ಇಲ್ಲವಾಗುತ್ತದೆ. ಇದರಿಂದ ಅರಣ್ಯಗಳ ಮೇಲಿನ ಒತ್ತಡ ಕಡಿಮೆಯಾಗಿ ಅವುಗಳು ಪುನಶ್ಚೇತನಗೊಳ್ಳಲು ನೆರವಾಗುತ್ತದೆ.

ಕೃಷಿ-ಅರಣ್ಯ ಪದ್ಧತಿಯನ್ನು ಜನಪ್ರಿಯಗೊಳಿಸುವುದು ಅರಣ್ಯ, ಕೃಷಿ, ತೋಟಗಾರಿಕೆ, ರೇಷ್ಮೆಕೃಷಿ, ಜಲಾನಯನ ಅಭಿವೃದ್ಧಿ ಇತ್ಯಾದಿ ಭೂ ಆಧಾರಿತ ಸರ್ಕಾರಿ ಇಲಾಖೆಗಳ ಸಂಯುಕ್ತ ಹೊಣೆಗಾರಿಕೆಯಾಗಿದೆ. ಅರಣ್ಯ ಇಲಾಖೆಯು ರೈತರಿಗೆ ರಿಯಾಯಿತಿ ದರದಲ್ಲಿ ಮರಗಳ ಪ್ರಭೇದದ ಸಸಿಗಳನ್ನು ಪೂರೈಸುತ್ತಿದೆ. ಈ ಇಲಾಖೆಯು **"ಕೃಷಿ ಅರಣ್ಯ ಪ್ರೋತ್ಸಾಹ ಯೋಜನೆ"**ಯಡಿಯಲ್ಲಿ ಮೂರು ವರ್ಷಗಳ ಅವಧಿಯಲ್ಲಿ ಮೂರು ಕಂತಿನಲ್ಲಿ ಪ್ರತಿ ಸಸಿಗೆ 100 ರೂಪಾಯಿಗಳ ಪ್ರೋತ್ಸಾಹ ಧನವನ್ನು ಸಹ ನೀಡುತ್ತಿದೆ. ಮರಗಳ ಕಡಿತಲೆಗೆ ಅನುಮತಿ ಮತ್ತು ಚೌಬೀನೆ/ ಉರುವಲು ಸಾಗಾಣಿಕೆಗೆ ಪರವಾನಗಿಯನ್ನು ನೀಡುವುದು ಸಹ ಅರಣ್ಯ ಇಲಾಖೆಯ ಜವಾಬ್ದಾರಿಯಾಗಿರುತ್ತದೆ. ಅರಣ್ಯ ಇಲಾಖೆಯು ವಿಧಿಸಿದ್ದ ಕಾನೂನಾತ್ಮಕ ನಿಬಂಧನೆಗಳು ಖಾಸಗಿಭೂಮಿಯಲ್ಲಿ ಮರಗಳನ್ನು **ಬೆಳೆಸಲು** ನಿರುತ್ತೇಜಕವಾಗಿರುತ್ತವೆಂದು ಭಾವಿಸಲಾಗಿತ್ತು. ಇದಕ್ಕೆ ಸ್ಪಂದಿಸಿದ ಇಲಾಖೆಯು ಅನೇಕ ಮರಗಳ ಪ್ರಭೇದಗಳ ಕಡಿತಲೆಗೆ ಅನುಮತಿಯನ್ನು ಪಡೆಯುವುದನ್ನು ಮತ್ತು ಕೆಲವು ಮರಗಳ ಸಾಗಾಣಿಕೆಗೆ ಅಗತ್ಯವಾಗಿದ್ದ ಪರವಾನಗಿಯನ್ನು ರದ್ದುಪಡಿಸಿದೆ. ಈ ಎರಡೂ ಅಗತ್ಯಗಳನ್ನು ರದ್ದುಪಡಿಸಿರುವ **ಹೆಬ್ಬೇವು** ಮತ್ತು **ಸಿಲ್ವರ್ ಓಕ್ ಪ್ರಭೇದಗಳು** ಕೃಷಿ ಅರಣ್ಯದಲ್ಲಿ ಈಗ ಹೆಚ್ಚು ಜನಪ್ರಿಯವಾಗಿವೆ. ಈ ಹಿನ್ನೆಲೆಯಲ್ಲಿ ಈಗ ಅಸ್ತಿತ್ವದಲ್ಲಿರುವ ಕಾನೂನು ಅವಕಾಶಗಳನ್ನು ಹೊಸದಾಗಿ ಪರಿಶೀಲಿಸುವ ಮತ್ತು ನಿಬಂಧನೆಗಳನ್ನು ಸಡಿಲಗೊಳಿಸುವ ಹಾಗು ಸರಳಗೊಳಿಸುವ ಕಾರ್ಯ ಅಗತ್ಯವಾಗಿದೆ. ಇದರಿಂದಾಗಿ ರೈತರು ತಮ್ಮ ಜಮೀನಿನಲ್ಲಿ ಹೆಚ್ಚು ಹೆಚ್ಚು ಮರಗಳನ್ನು ಬೆಳೆಯಲು ಉತ್ತೇಜನ ದೊರೆಯುತ್ತದೆ.

ಕೃಷಿ, ತೋಟಗಾರಿಕೆ, ರೇಷ್ಮೆಕೃಷಿ, ಜಲಾನಯನ ಅಭಿವೃದ್ಧಿ, ಗ್ರಾಮೀಣ ಅಭಿವೃದ್ಧಿ, ಇತ್ಯಾದಿ ಸರ್ಕಾರಿ ಇಲಾಖೆಗಳಲ್ಲಿ ಅನೇಕ ವರ್ಷಗಳಿಂದ ರೈತರ ಜೊತೆ ಒಡನಾಟವಿರುವ ಅತ್ಯುತ್ತಮ ವಿಸ್ತರಣಾ ಶಾಖೆಗಳಿವೆ. ಆದುದರಿಂದ **ಕೃಷಿ ಅರಣ್ಯ** ಪದ್ಧತಿಯನ್ನು ಪಾಲಿಸುವುದರಿಂದ ರೈತರಿಗೆ ದೊರೆಯುವ ನಾನಾ ಬಗೆಯ ಫಲಶ್ರುತಿಗಳ ಬಗ್ಗೆ ಅವರಲ್ಲಿ ಜಾಗೃತಿಮೂಡಿಸುವ ಕಾರ್ಯಗಳಿಗೆ ಈ ಇಲಾಖೆಗಳು ತಮ್ಮಲ್ಲಿರುವ ವಿಸ್ತರಣಾ ಘಟಕ/ಶಾಖೆಗಳನ್ನು ಬಳಸಿಕೊಳ್ಳಬೇಕು. ಹಾಗೆಯೇ ರೈತರು ತಮ್ಮ ಜಮೀನಿನಲ್ಲಿ **ಕೃಷಿ ಅರಣ್ಯ** ಬೆಳೆಸಲು ಇಲಾಖೆಗಳು ಸೂಕ್ತವಾದ ಸಸಿಗಳನ್ನು ಸಹ ನೀಡಬೇಕು.

- ಶ್ರೀ ದೀಪಕ್ ಶರ್ಮಾ ಭಾ.ಅ.ಸೇ(ನಿವೃತ್ತ)
ಸಂಪಾದಕರು

## ಬದುಗಳ ಮೇಲೆ ಮರಗಿಡ

**ಜಮೀನಿನಲ್ಲಿ ಮರಗಳನ್ನು ಬದುಗಳಲ್ಲೂ ಮತ್ತು ಅಂಚಿನಲ್ಲಿಯೂ ಬೆಳೆಸಬಹುದು. ಬದುಗಳ ಮೇಲೆ ಹಾಕಬೇಕೆಂದರೆ ಸಸಿಗಳನ್ನು ಹಾಕಬಾರದು. ಬೀಜಗಳನ್ನು ಹಾಕಬೇಕು. ಸಸಿಗಳು ಬದುಗಳ ಮೇಲೆ ಬೆಳೆಯುವ ಸಾಧ್ಯತೆ ಬಹಳ ಕಡಿಮೆ.ಇದು ನಮ್ಮ ಅನುಭವ. ಸಸಿಗಳನ್ನು ಹಾಕುವಾಗ ಟ್ರೆಂಚ್ (ಗುಂಡಿ) ವಿಧಾನದಲ್ಲೇ ಹಾಕಬೇಕು. ಬದುವಿನ ಪಕ್ಕದಲ್ಲಿ 2/2/2 ಅಡಿ ಅಳತೆಯ ಟ್ರೆಂಚ್‌ಗಳನ್ನು ಮಾಡಿಕೊಂಡು ಅದರಲ್ಲಿ ಸಸಿಗಳನ್ನು ಹಾಕಬೇಕು. ಆಗ ಅದು ಬೆಳೆಯುವ ಸಾಧ್ಯತೆ ಹೆಚ್ಚು. –**

**ಗ್ಲಿರಿಸಿಡಿಯಾ, ಅಗಸೆ, ಹೊಂಗೆ ಇದೆಲ್ಲ ಬದುಗಳ ಮೇಲೆ ಹಾಕಲು ಬಹಳ ಸೂಕ್ತ**

ಕೃಷಿವನ
ತ್ರೈ ಮಾಸಿಕ ವಾರ್ತಾಪತ್ರ

Volume : 1 Issue : 2
ಸಂಪುಟ : 1 ಸಂಚಿಕೆ : 2

## ಸಂಪಾದಕ ಮಂಡಳಿ

**ಗೌರವ ಸಂಪಾದಕರು**
ಶ್ರೀ ಎನ್.ಸಂಪಗಿ, ಭಾ.ಅ.ಸೇ(ನಿ)

**ಸಂಪಾದಕರು**
ಶ್ರೀ ದೀಪಕ್ ಶರ್ಮಾ, ಭಾ.ಅ.ಸೇ(ನಿ)

**ಸದಸ್ಯರು**
ಶ್ರೀ ಎ.ಎಂ.ಅಣ್ಣಯ್ಯ, ಭಾ.ಅ.ಸೇ(ನಿ)
ಡಾ. ಎನ್.ಸ್ವಾಮಿ ರಾವ್
ಡಾ. ಎಮ್. ಮಹಾದೇವ ಮೂರ್ತಿ.
ಶ್ರೀಮತಿ ಶೋಭಾ.ಎಚ್.ಜಿ

**ಕಛೇರಿ ವಿಳಾಸ:**
ಕೃಷಿ ಅರಣ್ಯ ರೈತರ ಮತ್ತು ತಂತ್ರಜ್ಞರ ಸಂಸ್ಥೆ(ನೊ)
ವನವಿಕಾಸ, ನೆಲಮಹಡಿ,
18ನೇ ಅಡ್ಡರಸ್ತೆ, ಮಲ್ಲೇಶ್ವರಂ,
ಬೆಂಗಳೂರು–560003
ದೂ: 080 23566126
Email: iaftbangalore@gmail.com

Publisher : **IAFT**
**Editor- Dipak Sharma, IFS(R)**
**KRUSHI VANA**
**Quarterly *news* letter**
**April to June 2019**
Printed by : **S.K.CHANDRASHEKAR,**
**Rathna Offset Printers, #.120,**
**1st Main Road,**
**Cavery Nadhi Road,**
**Bridavan Nagar,**
**Bangalore-560019**

## ಸುಭಾಷಿತ

ಕೊನೆಯಲ್ಲಿ ನಮ್ಮ ನೆನಪಿಗುಳಿಯುವುದು ನಮ್ಮ ಶತ್ರುಗಳ ಮಾತಲ್ಲ, ನಮ್ಮ ಮಿತ್ರರ ಮೌನ. – ಮಾರ್ಟಿನ್ ಲೂಥರ್ ಕಿಂಗ್ ಜ್ಯೂನಿಯರ್

## ಸದಸ್ಯತ್ವ.

ಸಂಸ್ಥೆಯ ಸದಸ್ಯತ್ವ ಎನ್ನುವಂತಹದ್ದು ಸಂಸ್ಥೆ / ವೈಯಕ್ತಿವಾಗಿ ಶಾಸ್ತ್ರೀಯ ಅರಣ್ಯೀಕರಣ ಯೋಜನೆಯಲ್ಲಿ ಆಸಕ್ತಿ ಹೊಂದಿದ್ದವರಿಗೆ ತೆರೆದಿರುತ್ತದೆ.

| ಸದಸ್ಯತ್ವದ ಕ್ರಮ | ಪ್ರವೇಶ ಶುಲ್ಕ |
|---|---|
| ಹಸಾಂಸ್ಥಿಕ ಸದಸ್ಯತ್ವ | 25,000–00 ರೂ |
| ಹಆಶ್ರಯದಾತ ಸದಸ್ಯತ್ವ | 20,000–00 ರೂ |
| ಹಜೀವಮಾನ ಸದಸ್ಯತ್ವ | 5,000–00 ರೂ |
| ಹಭಾಗೀದಾರ ಸದಸ್ಯತ್ವ | 2,000–00 ರೂ |
| ಹಸಾಮಾನ್ಯ ಸದಸ್ಯತ್ವ | 100–00 ರೂ |

ವಾರ್ತಾಪತ್ರದ ಚಂದಾ ವಿವರಗಳು –ಅಂಚೆವೆಚ್ಚ ಸೇರಿ
ಬಿಡಿ ಪ್ರತಿ: ರೂ. 20
ವಾರ್ಷಿಕ : ರೂ. 100

**ಕೃಷಿ ಅರಣ್ಯ ರೈತರ ಮತ್ತು ತಂತ್ರಜ್ಞರ ಸಂಸ್ಥೆ(ನೊ)**
**ವನವಿಕಾಸ, ನೆಲಮಹಡಿ, 18ನೇ ಅಡ್ಡರಸ್ತೆ, ಮಲ್ಲೇಶ್ವರಂ,**
**ಬೆಂಗಳೂರು–560003**
**ಮನವಿ:**

ಕೃಷಿ ಅರಣ್ಯ ರೈತರ ಮತ್ತು ತಂತ್ರಜ್ಞರ ಸಂಸ್ಥೆ(ನೊ)ಯು ಅಸ್ತಿತ್ವದಲ್ಲಿದ್ದು, ರೈತರ ಅಭಿವೃದ್ಧಿಗಾಗಿ ಮತ್ತು ಅರಣ್ಯಗಳನ್ನು ಉಳಿಸಿ ಬೆಳೆಸುವುದಕ್ಕಾಗಿ ಇರುವಂತಹ ಈ ಸಂಸ್ಥೆಯು ಮರ ಬೆಳೆಸುವ ಮೂಲಕ ರೈತರ ಮತ್ತು ರಾಜ್ಯದ ಸಮೃದ್ಧಿ ಮತ್ತು ರಾಜ್ಯದ ಸರ್ವತೋಮುಖ ಅಭಿವೃದ್ಧಿ, ಕರ್ನಾಟಕ ರೈತರ ವ್ಯವಸಾಯಕ್ಕೆ ಆಯೋಗ್ಯವಾದ ಬೀಳು ಭೂಮಿಯಲ್ಲಿಯೂ ಬೆಲೆ ಬಾಳುವ ಮರಗಳನ್ನು ಬೆಳೆಸಿ ಗ್ರಾಮೀಣ ಕುಟುಂಬಗಳ ಏಳ್ಗೆಗೂ ಪರಿಸರ ಸಂತುಲನಕ್ಕೂ ಅವಕಾಶ ಮಾಡಿ ಮರಗಳ ಸಹಾಯದಿಂದ ರಾಜ್ಯದ ಅಭಿವೃದ್ಧಿಗೆ ಸಹಾಯಕವಾಗುವ ಯೋಜನೆಗಾಗಿ ಸ್ಥಾಪಿಸಿರುವ ಸಂಸ್ಥೆಯಿದು.

ಇಲ್ಲಿ ಸ್ವಯಂ ಇಚ್ಛೆಯಿಂದ ಸೇವೆ ಮಾಡಲಿಚ್ಛಿಸುವ ಯಾವುದೇ ನಿವೃತ್ತರು, ಹಿರಿಯ ನಾಗರಿಕರು ಈ ಕೆಳಗಿನ ವಿಳಾಸವನ್ನು ಮತ್ತು ದೂರವಾಣಿಯನ್ನು ಸಂಪರ್ಕಿಸಬಹುದು.

ಶ್ರೀ. ಎ.ಎಂ. ಅಣ್ಣಯ್ಯ,ಭಾ.ಅ.ಸೇ(ನಿ)
ಕಾರ್ಯದರ್ಶಿ
ಕೃಷಿ–ಅರಣ್ಯ ರೈತರ ಮತ್ತು ತಂತ್ರಜ್ಞರ ಸಂಸ್ಥೆ(ನೊ)
ದೂ: 9448019306

# ಅರಣ್ಯ ಸಂರಕ್ಷಣೆ ಮತ್ತು ಕೃಷಿ ಅಭಿವೃದ್ಧಿಯಲ್ಲಿ ಕೃಷಿ ಅರಣ್ಯದ ಪಾತ್ರ

ಶ್ರೀ ದೀಪಕ್ ಶರ್ಮ
ಡಾ.ಕೆ.ಪುಟ್ಟಸ್ವಾಮಿ

ಈ ದೇಶದ ಒಟ್ಟು ಭೌಗೋಳಿಕ ಪ್ರದೇಶದಲ್ಲಿ ಕನಿಷ್ಠ ಮೂರನೇ ಒಂದರಷ್ಟು ಭಾಗವು ಅರಣ್ಯದಡಿಯಲ್ಲಿ ಅಥವಾ ಮರದ ಹೊದಿಕೆಯಡಿ ಇರುವುದು 1988ರ ರಾಷ್ಟ್ರೀಯ ಅರಣ್ಯ ನೀತಿಯ ಪ್ರಕಾರ ರಾಷ್ಟ್ರೀಯ ಗುರಿಯಾಗಿರಬೇಕು. ಆದುದರಿಂದ ಪ್ರತಿಯೊಂದು ರಾಜ್ಯವೂ ತನ್ನ ಒಟ್ಟು ಭೂಪ್ರದೇಶದಲ್ಲಿ ಕನಿಷ್ಠ ಮೂರನೇ ಒಂದರಷ್ಟು ಭಾಗದಲ್ಲಿ ಅರಣ್ಯ ಅಥವಾ ಮರಗಳ ಹೊದಿಕೆಯಿರುವ ಅದೇ ಗುರಿಯನ್ನು ಹೊಂದಬೇಕಿರುವುದು ಅಪೇಕ್ಷಣೀಯ ಕರ್ನಾಟಕದ ಒಟ್ಟು ಭೌಗೋಳಿಕ ಪ್ರದೇಶ 1,91,819 ಚ.ಕಿ.ಮೀ. ಹಾಗಾಗಿ ನಮ್ಮ ರಾಜ್ಯದಲ್ಲಿ 63,940 ಚ.ಕಿ.ಮೀ. ಪ್ರದೇಶವು ಅರಣ್ಯ ಅಥವಾ ಮರದ ಹೊದಿಕೆಯನ್ನು ಹೊಂದಿರಬೇಕು. ಆದರೆ ಭಾರತೀಯ ಅರಣ್ಯ ಸಮೀಕ್ಷೆಯು ಪ್ರಕಟಿಸಿರುವ 2017ರ ಅರಣ್ಯ ವರದಿಯ ಪರಿಸ್ಥಿತಿಯ ಪ್ರಕಾರ ಕರ್ನಾಟಕದಲ್ಲಿ ಅರಣ್ಯ ಮತ್ತು ಮರಗಳ ಹೊದಿಕೆ ಇರುವ ಒಟ್ಟು ವಿಸ್ತೀರ್ಣ 42,263 ಚ.ಕಿ.ಮೀ. ಆದುದರಿಂದ ಪ್ರಸ್ತುತ 20,500 ಚ.ಕಿ.ಮೀ. ವಿಸ್ತೀರ್ಣದ ಅರಣ್ಯ ಪ್ರದೇಶದ ಕೊರತೆಯಿದೆ. ಇಲ್ಲಿ ಅರಣ್ಯ ಮತ್ತು ಮರಗಳ ಹೊದಿಕೆಯ ಪ್ರದೇಶವು ಖಾಸಗಿ ಜಮೀನುಗಳಲ್ಲಿ ಬೆಳೆದಿರುವ ಮರಗಳನ್ನು ಸಹ ಒಳಗೊಂಡಿದೆ. ಭಾರತೀಯ ಅರಣ್ಯ ಸಮೀಕ್ಷೆಯ ಮೇಲಿನ ವರದಿಯ ಪ್ರಕಾರ ಈಗಿರುವ ಕರ್ನಾಟಕದ ಒಟ್ಟು 43,263 ಚ.ಕಿ.ಮೀ. ಅರಣ್ಯ ಪ್ರದೇಶದಲ್ಲಿ 22,384 ಚ.ಕಿ.ಮೀ. ಪ್ರದೇಶವು ಕರ್ನಾಟಕ ಅರಣ್ಯ ಇಲಾಖೆಯ ಸುಪರ್ದಿಯಲ್ಲಿರುವ ಸ್ವಾಭಾವಿಕ ಅರಣ್ಯಗಳ ಪಾಲಾಗಿದೆ. ಉಳಿದ 20,979 ಚ.ಕಿ.ಮೀ. ಪ್ರದೇಶವು ಕಂದಾಯ ಭೂಮಿಯಲ್ಲಿರುವ ಸ್ವಾಭಾವಿಕ ಅರಣ್ಯಗಳು, ಅರಣ್ಯೇತರ ಪ್ರದೇಶಗಳಲ್ಲಿ ಬೆಳೆದಿರುವ ಮರಗಳು (ಸಾಮಾಜಿಕ ಅರಣ್ಯ, ರಸ್ತೆಬದಿಯಲ್ಲಿ ನೆಟ್ಟ ಗಿಡಗಳು) ಹಾಗೂ ಕಾಫಿ, ಚಹ, ತೆಂಗು, ಅಡಿಕೆ, ಗೋಡಂಬಿ, ರಬ್ಬರ್, ಮಾವು, ದಾಳಿಂಬೆ, ಕಿತ್ತಳೆ ಮುಂತಾದವೂ ಸೇರಿದಂತೆ ಖಾಸಗಿ ಜಮೀನಿನಲ್ಲಿ ಇರುವ ತೋಟಗಳ ಕೊಡುಗೆಯಾಗಿದೆ.

ಒಂದು ಗಟ್ಟಿಕಾಂಡದ ಯಾವುದೇ ಬಹು ವಾರ್ಷಿಕ ಮರವು ಈ ರೀತಿಯ ಖಾಸಗಿ ತೋಟಗಳ ವರ್ಗಕ್ಕೆ ಸೇರುತ್ತದೆ. ಇಲ್ಲೊಂದು ವಿಶೇಷವನ್ನು ಪ್ರಸ್ತಾಪಿಸುವುದು ಉಚಿತ. ಕರ್ನಾಟಕದಲ್ಲಿ ಅಧಿಸೂಚನೆಯಾಗಿರುವ ಅರಣ್ಯ ಪ್ರದೇಶವು 33,358 ಚ..ಕಿ.ಮೀ. ಆಗಿದ್ದರೂ ಸಹ ಅರಣ್ಯ ವರದಿಯ ಸ್ಥಿತಿಗತಿಯ ಪ್ರಕಾರ ಅರಣ್ಯ ಪ್ರದೇಶವಿರುವುದು 22,384 ಚ.ಕಿ.ಮೀ. ಮಾತ್ರ. ಅಂದರೆ 11,000 ಚ.ಕಿ.ಮೀ. ಕೊರತೆಯನ್ನು ಅದು ಸೂಚಿಸುತ್ತದೆ. ಈ ವ್ಯತ್ಯಾಸಕ್ಕೆ ಕಾರಣ ಅರಣ್ಯ ಪ್ರದೇಶವನ್ನು ಲೆಕ್ಕ ಹಾಕುವ ಸಮಯದಲ್ಲಿ ಶೇ. 10ರಷ್ಟು ಮೇಲ್ಛಾವಣಿ ಸಾಂದ್ರತೆಯಿರದ ಅರಣ್ಯ ಪ್ರದೇಶಗಳನ್ನು ಲೆಕ್ಕದಿಂದ ಬಿಟ್ಟಿರುವುದು ಈ ರೀತಿ ಬಿಟ್ಟಿರುವ ಪ್ರದೇಶಗಳಲ್ಲಿ ಎತ್ತರದ ಮಟ್ಟದಲ್ಲಿ ಇರುವ ಹುಲ್ಲುಗಾವಲುಗಳು, ಕಲ್ಲು ಮತ್ತು ಮೊರಡಿ ಪ್ರದೇಶಗಳು, ಜಲಾಗಾರಗಳು, ಕುರುಚಲು ಕಾಡುಗಳು ಮತ್ತು ಬೀಳು ಪ್ರದೇಶಗಳು ಸೇರಿವೆ. ಸಾಮಾನ್ಯವಾಗಿ ಜನವಸತಿಯ ಸುತ್ತಮುತ್ತ ಇರುವ ಇಂಥ ಪ್ರದೇಶಗಳಲ್ಲಿ ಅರಣ್ಯ ಇಲಾಖೆಯ ಗಿಡನೆಡುವ ಬಹುತೇಕ ಚಟುವಟಿಕೆಗಳು ನಡೆಯುತ್ತದೆ. ಈ ರೀತಿಯ ನೆಡುತೋಪುಗಳು ಆರಂಭದಲ್ಲಿ ಉತ್ತಮವಾಗಿ ಪ್ರವರ್ಧಮಾನಕ್ಕೆ ಬಂದರೂ, ಆರೇಳು ವರ್ಷಗಳಲ್ಲಿ ಜನರು ಕಡಿಯುವುದರಿಂದ, ಜಾನುವಾರುಗಳು ಮೇಯುವಿಕೆಯಿಂದ ಅಪಾರವಾದ ಜೈವಿಕ ದ್ರವ್ಯವನ್ನು ಕೊಯ್ಲು ಮಾಡುವುದರಿಂದ ಆ ಪ್ರದೇಶಗಳಲ್ಲಿ



ಸಸ್ಯಗಳ ಸಂಖ್ಯೆ ತೆಳುವಾಗುತ್ತದೆ. ಇದರ ಪರಿಣಾಮವಾಗಿ, ಪ್ರತಿ ವರ್ಷವೂ ಅರಣ್ಯ ಇಲಾಖೆಯು ಅಪಾರ ಪ್ರಮಾಣದಲ್ಲಿ ಗಿಡ ನೆಡುವ ಕಾರ್ಯಕ್ರಮಗಳನ್ನು ಜಾರಿಗೊಳಿಸಿದರೂ, ಅನೇಕ ವರ್ಷಗಳ ನಂತರವೂ ಅರಣ್ಯ ಪ್ರದೇಶದಲ್ಲಿ ಉಂಟಾಗಿರುವ ಏರಿಕೆ ಗಣನೀಯವಾಗಿಲ್ಲ. ಕುರುಚಲು ಕಾಡಿನಲ್ಲಿ ಮರಗಳ ಮೇಲ್ಛಾವಣಿ ಸಾಂದ್ರತೆಯು ಶೇ. 10ಕ್ಕಿಂತ ಹೆಚ್ಚಾಗಬೇಕಾದರೆ ಉಳಿದಿರುವ ಏಕೈಕ ದಾರಿಯೆಂದರೆ, ಈ ಅರಣ್ಯಗಳಿಂದ ಜೈವಿಕ ದ್ರವ್ಯವನ್ನು ಹೆಚ್ಚಾಗಿ ಶೋಷಿಸುವುದನ್ನು ತಡೆಯುವುದು. ಇದು, ಅರಣ್ಯ ಪ್ರದೇಶಗಳಿಂದ ಹೊರತೆ ತೀವ್ರವಾದ ಮಟ್ಟದಲ್ಲಿ ಕೃಷಿ–ಅರಣ್ಯವನ್ನು ಜಾರಿಗೆ ತರುವ ಮೂಲಕ ಅಪಾರ ಪ್ರಮಾಣದ ಜೈವಿಕ ದ್ರವ್ಯವನ್ನು ಸೃಷ್ಟಿಸುವುದರಿಂದ ಮಾತ್ರ ಸಾಧ್ಯ. ಕೃಷಿ–ಅರಣ್ಯದಿಂದ ಎರಡು ರೀತಿಯ ಅನುಕೂಲಗಳು ಸಾಧ್ಯವಾಗುತ್ತದೆ. ಒಂದೆಡೆ ಖಾಸಗಿ ಜಮೀನಿನಲ್ಲಿ ಮರಗಳ ಹೊದಿಕೆ ಹೆಚ್ಚುತ್ತದೆ. ಇನ್ನೊಂದೆಡೆ ಕುರುಚಲು ಕಾಡಿನ ಮೇಲಿನ ಒತ್ತಡ ಕಡಿಮೆಯಾಗುತ್ತದೆ. ಇದರ ಪರಿಣಾಮವಾಗಿ ಕುರುಚಲು ಕಾಡುಗಳು ಹೆಚ್ಚು ಅಭಿವೃದ್ಧಿಯಾಗುತ್ತವೆ. ಅಂತಿಮವಾಗಿ ಅವು ಹೆಚ್ಚಿನ ಮೇಲ್ಛಾವಣಿ ಸಾಂದ್ರತೆಯಿರುವ ಅರಣ್ಯದ ಬೆಳವಣಿಗೆಯನ್ನು ಪೋಷಿಸುತ್ತವೆ.

ಕೃಷಿ ಅರಣ್ಯವು ಅನೇಕ ಕಾರಣಗಳಿಗಾಗಿ ಅಗತ್ಯ. ಮೇಲೆ ಸೂಚಿಸಿದಂತೆ ಮರಗಳ ಹೊದಿಕೆಯನ್ನು ಹೆಚ್ಚಳಕ್ಕೆ ಮಾತ್ರವಲ್ಲದೆ ರಾಜ್ಯದಲ್ಲಿ ಈಗ ನಡೆಯುತ್ತಿರುವ ಕೃಷಿ ಚಟುವಟಿಕೆಗಳು ಪರಿಸರಾತ್ಮಕವಾಗಿ ಮತ್ತು ಲಾಭದಾಯಕವಾಗಿ ಸ್ಥಿರಗೊಳ್ಳಲು ಕೃಷಿ–ಅರಣ್ಯ ಚಟುವಟಿಕೆಗಳು ಅಗತ್ಯ. ಅನಾವೃಷ್ಟಿ ಅಥವಾ ಬರಗಾಲದಂತಹ ಪರಿಸ್ಥಿತಿಗಳಲ್ಲಿ ಕೃಷಿ–ಅರಣ್ಯದ ಜೊತೆಗೆ ಬೇಸಾಯ ಚಟುವಟಿಕೆಗಳು ರೈತರಿಗೆ ಉತ್ತಮ ಭದ್ರತೆ ಒದಗಿಸಬಲ್ಲವು.

ಕೃಷಿ–ಅರಣ್ಯ ಎಂದರೆ ಬೇಸಾಯದ ವ್ಯವಸ್ಥೆಗಳಲ್ಲಿ ಗಡಸುಕಾಂಡದ ವಾರ್ಷಿಕ ಸಸ್ಯಗಳನ್ನು ಬೆಳೆಸುವುದು. ಇದು ಜಮೀನುಗಳ ಹೊರಗಿನ ಮತ್ತು ಒಳಗಿನ ಗಡಿಗಳಲ್ಲಿ ಬೆಳೆಯ ಪ್ರದೇಶದಲ್ಲಿ ಹೊಲಮನೆಗಳ ಆವರಣದಲ್ಲಿ ಅಥವಾ ಕೃಷಿ ಜಮೀನಿನ ಒಳಗೆ ಅಥವಾ ಅಂಚಿನಲ್ಲಿ ಲಭ್ಯವಿರುವ ಯಾವುದೇ ಭಾಗದಲ್ಲಿ

– ಮುಂದಿನ ಪುಟಕ್ಕೆ...

–ಹಿಂದಿನ ಪುಟದಿಂದ...

ಮರಗಳು ಇದ್ದರೆ ಅದು ಕೃಷಿ–ಅರಣ್ಯದ ಭಾಗವಾಗುತ್ತದೆ. ಇದು ಅನಾದಿಕಾಲದಿಂದ ಅನುಸರಿಸಿಕೊಂಡು ಬಂದಿರುವ ಪದ್ಧತಿ. ಪ್ರಾಚೀನ ಕಾಲದಿಂದಲೂ ಭೂಬಳಕೆ ಮತ್ತು ಜೀವನಕ್ರಮದ ಭಾಗವಾಗಿ ಅಸ್ತಿತ್ವದಲ್ಲಿರುವ ಪಾರಂಪರಿಕ ಪದ್ಧತಿ. ಇದು ಅನೇಕ ಅವಶ್ಯಕತೆಗಳಿಗಾಗಿ ಕೃಷಿ ಜಮೀನುಗಳಲ್ಲಿ, ಗ್ರಾಮೀಣ ಪ್ರದೇಶಗಳಲ್ಲಿ ಆಚರಣೆಯಲ್ಲಿರುವ ಪದ್ಧತಿ. ಇದಕ್ಕಾಗಿ ಮಣ್ಣಿನ ಫಲವತ್ತತೆಯನ್ನು ಹೆಚ್ಚಿಸಲು ಜೈವಿಕ ಗೊಬ್ಬರ ನೀಡುವ ಮರಗಳು, ಭೂಗುಣಮಟ್ಟವನ್ನು ಹೆಚ್ಚಿಸುವ, ಆಹಾರ ಭದ್ರತೆಯನ್ನು ಒದಗಿಸುವ, ಉರುವಲು, ಮೇವು ನೀಡುವ, ಹಣತರುವ ಹಣ್ಣಿನ ಮರಗಳು, ಚೌಬೀನೆಯುಳ್ಳದ ಅರಣ್ಯ ಉತ್ಪನ್ನಗಳನ್ನು, ಚೌಬೀನೆ, ನೆರಳು, ಆಸರೆ ಮುಂತಾದವುಗಳನ್ನು ನೀಡುವ ಮರಗಳನ್ನು ಬೆಳೆಸಲಾಗುತ್ತಿತ್ತು. ರೈತರು ಸಾಮಾನ್ಯವಾಗಿ ವಿವಿಧ ಉಪಯೋಗಕ್ಕೆ ಒದಗಿ ಬರುವ ಮರಗಳ ಪ್ರಭೇದಗಳಿಗೆ ಆದ್ಯತೆ ನೀಡುತ್ತಿದ್ದದ್ದು ಕಂಡುಬಂದಿದೆ. ಕೃಷಿ ಅರಣ್ಯ ವ್ಯವಸ್ಥೆಯಲ್ಲಿ ಬೆಳೆಯುವ ಮರಗಳು ಮೇವು, ಹಣ್ಣು, ಚೌಬೀನೆ, ಉರುವಲು, ಔಷಧಿಗಳು, ರಾಳ, ಗೋಂದು ಮತ್ತು ಹಸಿರೆಲೆ ಗೊಬ್ಬರವ ನೀಡುವ ಮರಗಳಲ್ಲದೆ ಜೈವಿಕ ಸಾರಜನಕವನ್ನು ಸ್ಥಿರೀಕರಿಸುವ, ಭೂ ಸವಕಳಿಯನ್ನು ತಡೆಯುವ, ನೀರಿನ ಇಂಗುವಿಕೆಯನ್ನು ಹೆಚ್ಚಿಸುವ, ಭೂಮಿಯ ಸೂಕ್ಷ್ಮ ಹವಾಮಾನವನ್ನು ವೃದ್ಧಿಸುವಂತಹ ಇತ್ಯಾದಿ ಪರೋಕ್ಷ ಲಾಭವನ್ನು ನೀಡುವ ವೃಕ್ಷಗಳನ್ನು ಬೆಳೆಸಲಾಗುವುದು.

ಕರ್ನಾಟಕದಲ್ಲಿ ಹಂಚಿಕೆಯಾಗಿರುವ ಅರಣ್ಯ ಪ್ರದೇಶದ ಒಂದು ವಿಶೇಷತೆಯೆಂದರೆ ಅರಣ್ಯವಿರುವ ಒಟ್ಟು ಭೌಗೋಳಿಕ ಪ್ರದೇಶದಲ್ಲಿ ಶೇ. 45ರಷ್ಟು ಪ್ರದೇಶ ಪಶ್ಚಿಮ ಘಟ್ಟಗಳಲ್ಲಿ ಕೇಂದ್ರೀಕರಿಸಿದೆ. ಉಳಿದಂತೆ ಶೇ. 12 ಭಾಗ ಕರ್ನಾಟಕದ ಒಳನಾಡು ಪ್ರದೇಶಗಳಲ್ಲಿ ಮತ್ತು ಶೇ. 8 ರಷ್ಟು ಪೂರ್ವ ಬಯಲಿನಲ್ಲಿ ಹರಡಿದೆ. ಈ ಮೂರು ವಲಯಗಳಲ್ಲಿರುವ ಧಾನ್ಯ ಬೆಳೆಯುವ ಕೃಷಿ ಜಮೀನಿನ ಪ್ರಮಾಣ ಕ್ರಮವಾಗಿ ಶೇ. 44, ಶೇ. 74 ಮತ್ತು ಶೇ. 81ರಷ್ಟಿದೆ. ರಾಜ್ಯದ ಒಟ್ಟು ಭೌಗೋಳಿಕ ಪ್ರದೇಶದಲ್ಲಿ ಮೂರನೇ ಎರಡರಷ್ಟು ಭಾಗವಿರುವ ರಾಜ್ಯ ಒಳನಾಡು ಮತ್ತು ಪೂರ್ವ ಬಯಲಿನಲ್ಲಿ ಅತ್ಯಂತ ಕಡಿಮೆ ಪ್ರಮಾಣದಲ್ಲಿ ಅರಣ್ಯ ಹರಡಿರುವುದು ಕಳವಳಕಾರಿಯಾದ ಸಂಗತಿ. ತೆರೆದ ಬಯಲಿನ ಕೃಷಿ ಭೂಮಿಗಳ ಹತ್ತಿರ ಮರಗಳ ಹೊದಿಕೆ ಸಾಕಷ್ಟು ಪ್ರಮಾಣದಲ್ಲಿ ಇಲ್ಲದೇ ಹೋದರೆ, ಕೃಷಿ ಜಮೀನುಗಳ ದೀರ್ಘಕಾಲ ಆರೋಗ್ಯವಾಗಿರಲು ಸಾಧ್ಯವಿರುವುದಿಲ್ಲ.

ಧಾನ್ಯ ಬೆಳೆಯುವ ಕೃಷಿ ಜಮೀನು ಎಷ್ಟು ಪ್ರಮಾಣದಲ್ಲಿದ್ದರೆ ಸೂಕ್ತ ಎಂಬುದನ್ನು ನಿರ್ಧರಿಸುವುದು ಕಷ್ಟದ ಕಾರ್ಯ. ಆದರೆ ದೇಶದ ಒಟ್ಟು ಭೌಗೋಳಿಕ ಪ್ರದೇಶದಲ್ಲಿ ಕನಿಷ್ಟ ಮೂರನೇ ಒಂದರಷ್ಟು ಪ್ರದೇಶವು ಅರಣ್ಯ ಭೂಮಿಯಾಗಿರಬೇಕೆಂಬ ಗುರಿಯನ್ನು 1988ರ ರಾಷ್ಟ್ರೀಯ ಅರಣ್ಯ ನೀತಿಯು ನಿಗದಿಪಡಿಸಿದೆ. ಕೆಲವು ಪ್ರದೇಶಗಳನ್ನು ಕಟ್ಟಡ ನಿರ್ಮಾಣ, ಜಲಾಗಾರಗಳ ನಿರ್ಮಾಣ ಇತ್ಯಾದಿ ಭೂಬಳಕೆಯ ಇತರೆ ಅಗತ್ಯಗಳಿಗೆ ಕೆಲವು ಪ್ರಮಾಣದ ಭೂಪ್ರದೇಶವನ್ನು ಮೀಸಲಿಡಬೇಕಾಗುತ್ತದೆ, ಎಂಬ ಅಂಶವನ್ನು ಪರಿಗಣಿಸಿದರೆ, ದೇಶ/ರಾಜ್ಯದ ಒಟ್ಟು ಭೌಗೋಳಿಕ ಪ್ರದೇಶದಲ್ಲಿನ ಬೆಳೆ ಪ್ರದೇಶವು ಶೇ. 55–60ರಷ್ಟಿರಬೇಕಾಗುತ್ತದೆ. ಕರ್ನಾಟಕದ ಒಳನಾಡು ಪ್ರದೇಶ ಮತ್ತು ಪೂರ್ವ ಬಯಲಿನಲ್ಲಿ ಕೃಷಿ ಬೆಳೆಯ ಪ್ರದೇಶಕ್ಕೆ ಒಳಪಟ್ಟಿರುವ ಪ್ರಮಾಣ ಶೇ. 75–80ರಷ್ಟಿದೆ. ಗದಗ, ವಿಜಯಪುರ, ಕಲ್ಬುರ್ಗಿ ಮತ್ತು ಯಾದಗಿರಿಯಂಥ ಕೆಲವು ಜಿಲ್ಲೆಗಳಲ್ಲಿ ಈ ಪ್ರಮಾಣ ಶೇ. 90ರಷ್ಟನ್ನು ಮುಟ್ಟಿದೆ.

ಯಾವುದೇ ಮರದ ಹೊದಿಕೆ ಅಥವಾ ತೋಪುಗಳಲ್ಲದೆ ಕೇವಲ ಧಾನ್ಯ ಬೆಳೆಯುವ ವಿಶಾಲ ಕೃಷಿ ಭೂಮಿಯಿದ್ದರೆ, ಪರಿಸರಾತ್ಮಕವಾಗಿ ಸುಸ್ಥಿರಯಿಲ್ಲದೆ ಹೆಚ್ಚು ವ್ಯತಿರಿಕ್ತ ಪರಿಣಾಮ ಬೀರುವ ಅಪಾಯವಿದೆ. ಅದರಲ್ಲೂ ವಿಶೇಷವಾಗಿ ಮಳೆ ಅಭಾವದ ಮತ್ತು ಬರಕ್ಕೆ ಸುಲಭವಾಗಿ ತುತ್ತಾಗುವ ಕರ್ನಾಟಕದ ಒಳನಾಡು ಮತ್ತು ಪೂರ್ವ ಬಯಲಿನ ಪ್ರದೇಶಗಳು ಹೆಚ್ಚು ಅಪಾಯ ಎದುರಿಸುತ್ತದೆ. ಕೃಷಿಯು ಸುಸ್ಥಿರಗೊಳ್ಳುವುದಕ್ಕೆ ಮತ್ತು ಆಹಾರ ಭದ್ರತೆಗೆ ಅರಣ್ಯ ಅಥವಾ ಮರಗಳ ಹೊದಿಕೆ ಹೆಚ್ಚಿಸಲು ರೈತ ಸಮುದಾಯ ಮುಂದಾಗಬೇಕಿರುವುದು ಅಗತ್ಯವಾಗಿದೆ. ಕೃಷಿ ಭೂಮಿಯನ್ನು ಹೆಚ್ಚಿಸಬೇಕೆಂಬ ದಾಹ ಎಷ್ಟು ತೀವ್ರವಾಗಿದೆಯೆಂದರೆ, ಜಮೀನಿನಲ್ಲಿ ಬೆಳೆಯುವ ಯಾವುದೇ ಮರ ಅನಗತ್ಯವಾಗಿ ಅಡ್ಡವಾಗುತ್ತಿದೆಯೆಂದು ಭಾವಿಸಿ ಮುಂದಾಲೋಚನೆ ಮಾಡದೆ ಅಥವಾ ಕಾಳಜಿಯನ್ನು ತೋರದೆ ನಿರ್ಮೂಲನ



ಮಾಡಲಾಗುತ್ತದೆ. ಈ ತಪ್ಪು ತಿಳಿವಳಿಕೆಯನ್ನು ಹೋಗಲಾಡಿಸಿ ಕೃಷಿ ಅಭಿವೃದ್ಧಿಯಲ್ಲಿ ಅರಣ್ಯ ಮತ್ತು ಮರಗಳು ವಹಿಸುವ ಧನಾತ್ಮಕ ಪರಿಣಾಮಗಳ ಬಗ್ಗೆ ಜಾಗೃತಿ ಮೂಡಿಸುವುದು ಇಂದಿನ ಅಗತ್ಯವಾಗಿದೆ. ಭೂಮಿಯಲ್ಲಿ ಅರಣ್ಯ ಹೊದಿಕೆಯನ್ನು ಉಳಿಸಿ ಬೆಳೆಸುವುದರಿಂದ ನೀರಿನ ಫಲವತ್ತತೆಯ ಸಂರಕ್ಷಣೆಯಾಗುತ್ತದೆ. ಅದು ಕೃಷಿ ಬೆಳೆಯ ಇಳುವರಿಯ ಹೆಚ್ಚಳಕ್ಕೆ ಕಾರಣವಾಗುತ್ತದೆ. ಜೈವಿಕ ದ್ರವ್ಯದ ಉತ್ಪಾದನೆ ಮತ್ತು ನಿರ್ವಹಣೆ, ಸಾರಜನಕ ಸ್ಥಿರೀಕರಣ, ಪೌಷ್ಟಿಕಾಂಶಗಳ ಮರುಪೂರಣ, ಪೌಷ್ಟಿಕಾಂಶಗಳನ್ನು ಹೀರಿಕೊಳ್ಳಲು ನೆರವು ಇತ್ಯಾದಿ ಅನೇಕ ಪ್ರಕ್ರಿಯೆಗಳು ಜರುಗಲು ಮರಗಳು ಮಣ್ಣನ್ನು ಫಲವತ್ತುಗೊಳಿಸುತ್ತವೆ. ಅರಣ್ಯ ಅಥವಾ ಮರಗಳ ಹೊದಿಕೆಯು ಸಲ್ಲಿಸುವ ಕಾಣಿಕೆ ಅನೇಕ ರೀತಿಯದು. ಒಂದೆಡೆ ಮಣ್ಣಿನ ಫಲವತ್ತತೆಯ ನಿರ್ವಹಣೆ, ಭೂ ಸವಕಳಿ ನಿಯಂತ್ರಣದಂತಹ ಪರಿಸರಾತ್ಮಕ ಕಾರ್ಯಗಳನ್ನು ಮತ್ತು ತೇವಾಂಶ ಸಂರಕ್ಷಣೆ ಹಾಗೂ ಜೀವವೈವಿಧ್ಯವನ್ನು ಸಂರಕ್ಷಿಸುತ್ತವೆ. ಇನ್ನೊಂದೆಡೆ ಅವು ಆಹಾರ ಉತ್ಪಾದನೆಯಲ್ಲಿ ನೇರವಾಗಿ ನೆರವಾಗುತ್ತವೆ. ಉರುವಲು, ಮೇವು, ಕೃಷಿಗೆ ಬೇಕಾಗುವ ಒಳಸುರಿಗಳು, ಸಂಪತ್ತು ಸೃಷ್ಟಿ ಮತ್ತು ಗ್ರಾಮೀಣ ಉದ್ಯೋಗ ಸೃಷ್ಟಿಯಂಥ ಕಾರ್ಯಗಳಿಗೆ ಸಾಧನವಾಗುತ್ತವೆ. ಅರಣ್ಯ ಅಥವಾ ಮರಗಳ ಹೊದಿಕೆಯು ಕೃಷಿ ಉತ್ಪಾದನೆಯನ್ನು ಮತ್ತು ಆಹಾರ ಲಭ್ಯತೆಗೆ ಕಾರಣವಾಗುತ್ತದೆ. ಅಥವಾ ಅಗತ್ಯವಾದಷ್ಟು ಆಹಾರ ಪೂರೈಕೆಯನ್ನು ಖರೀದಿಸಲು ಜನರಲ್ಲಿ ಸಾಮರ್ಥ್ಯವನ್ನು ಹೆಚ್ಚಿಸುತ್ತದೆ.

ರಾಜ್ಯದಲ್ಲಿ ಅರಣ್ಯ ಕೃಷಿಗೆ ಹೆಚ್ಚಿನ ಒತ್ತು ನೀಡಲು ಮತ್ತೊಂದು

– ಮುಂದಿನ ಪುಟಕ್ಕೆ...

–ಹಿಂದಿನ ಪುಟದಿಂದ...

ಕಾರಣವೂ ಇದೆ. ರಾಜ್ಯದಲ್ಲಿ ಹಾಲಿ ಕೃಷಿ ಬೆಳೆಯನ್ನು ಬೆಳೆಯುವ ಪ್ರದೇಶದ ಶೇ. 44ರಷ್ಟು ಪ್ರದೇಶವು ಅಲ್ಪ ಅಥವಾ ಅತ್ಯಂತ ಅಲ್ಪ ಪ್ರಮಾಣದ ಲಭ ಜಲ ಸಾಮರ್ಥ್ಯ ಹೊಂದಿವೆ. ಇಂಥ ಪ್ರದೇಶಗಳಲ್ಲಿ ವಾರ್ಷಿಕ ಧಾನ್ಯ ಬೆಳೆ ಬೆಳೆಯುವುದು ಲಾಭಕರವಲ್ಲ. ಇದು ಮಣ್ಣಿನ ಗುಣಮಟ್ಟ ಮತ್ತಷ್ಟು ಕುಸಿಯಲು ಕಾರಣವಾಗುತ್ತದೆ. ಅಂಥ ಪ್ರದೇಶಗಳನ್ನು ಕೃಷಿ–ಅರಣ್ಯ ಪದ್ಧತಿಯಡಿ ಬಹುವಾರ್ಷಿಕ ಬೆಳೆಯಡಿಯಲ್ಲಿ ಮತ್ತು ಒಣಭೂಮಿ ತೋಟಗಾರಿಕೆ ಮತ್ತು ರೇಷ್ಮೆ ಕೃಷಿ (ಹಿಪ್ಪುನೇರಳೆ ಮರ) ಯಡಿಯಲ್ಲಿ ತರುವುದು ಉಚಿತ. ಈ ಚಟುವಟಿಕೆಗಳು ಸುಲಭದಲ್ಲಿ ಬರಕ್ಕೆ ತುತ್ತಾಗುವ ಕೃಷಿ ಭೂಮಿಯಲ್ಲಿ ಬರವನ್ನು ವಿರೋಧಿಸುತ್ತವೆ.

ಈಗ ಮೇಲೆ ಹೇಳಿರುವ ವಿಷಯಗಳ ದೃಷ್ಟಿಯಿಂದ ಮತ್ತು ದೀರ್ಘಕಾಲದಲ್ಲಿ ಕೃಷಿ ಅರಣ್ಯ ಚಟುವಟಿಕೆಗಳು ನೀಡುವ ಲಾಭಕರ ಪರಿಣಾಮಗಳನ್ನು ಪರಿಗಣಿಸಿದರೆ ಕೃಷಿ ಮತ್ತು ಅರಣ್ಯ ಇಲಾಖೆಗಳೆರಡೂ ಕೃಷಿ ಅರಣ್ಯ ಅಭಿವೃದ್ಧಿಗೆ ಹೆಚ್ಚು ಆದ್ಯತೆ ನೀಡುವ ಅಗತ್ಯವಿದೆ. ಕೃಷಿ ಇಲಾಖೆಯಲ್ಲಿ ಈಗಾಗಲೇ ವ್ಯಾಪಕವೂ, ಸಮರ್ಥವೂ ಆದ ವಿಸ್ತರಣಾ ಶಾಖೆಯಿದೆ. ಕೃಷಿ ಅರಣ್ಯ ಪದ್ಧತಿಯ ಬಗ್ಗೆ ಅರಿವು ಮತ್ತು ಪ್ರೇರಣೆ ಮೂಡಿಸಲು ಈ ವಿಭಾಗ ತನ್ನ ಸಂಪೂರ್ಣ ಸಾಮರ್ಥ್ಯವನ್ನು ವಿನಿಯೋಗಿಸಬೇಕು. ರೈತರು ತಮ್ಮ ಕೃಷಿ ಭೂಮಿಯಲ್ಲಿ ಗಿಡನೆಡುವ ಚಟುವಟಿಕೆಗಳನ್ನು ಕೈಗೆತ್ತಿಕೊಳ್ಳುವಂತೆ ಪ್ರೋತ್ಸಾಹಿಸಲು ಅರಣ್ಯ ಇಲಾಖೆ ತನ್ನ ವಿಸ್ತರಣಾ ವಿಭಾಗವನ್ನು ಸಬಲಗೊಳಿಸಬೇಕು. ಈ ನಿಟ್ಟಿನಲ್ಲಿ ಇಲಾಖೆಯು ಈಗಾಗಲೇ ದೃಢವಾದ ಹೆಜ್ಜೆ ಇಟ್ಟಿದೆ. ಅರಣ್ಯ ಮತ್ತು ಮರಗಳ ಹೊದಿಕೆಯನ್ನು ಹೆಚ್ಚಿಸುವ ಕಾರ್ಯದಲ್ಲಿ ರೈತರು ಮತ್ತು ಸಾರ್ವಜನಿಕರ ಸಹಕಾರವನ್ನು ಪಡೆಯಲು ರಾಜ್ಯದಲ್ಲಿ **'ಕೃಷಿ ಅರಣ್ಯ ಪ್ರೋತ್ಸಾಹ ಯೋಜನೆ'** ಎಂಬ ಕಾರ್ಯಕ್ರಮಕ್ಕೆ ಚಾಲನೆ ನೀಡಲಾಗಿದೆ.

ಈ ಕಾರ್ಯಕ್ರಮದ ಪ್ರಕಾರ ತಮ್ಮ ಜಮೀನಿನಲ್ಲಿ ಮರಗಳನ್ನು ನೆಡಲು ಅಗತ್ಯವಾದ ಸಸಿಗಳನ್ನು ಇಲಾಖೆಯ ಹತ್ತಿರದ ಸಸಿಮಡಿಗಳಲ್ಲಿ ರಿಯಾಯಿತಿ ಬೆಲೆಯಲ್ಲಿ ರೈತರಿಗೆ ಒದಗಿಸಲಾಗುತ್ತದೆ. ಅಲ್ಲದೆ ನೆಟ್ಟ ಗಿಡಗಳಲ್ಲಿ ಮೊದಲ ವರ್ಷದ ಅಂತ್ಯದಲ್ಲಿ ಬದುಕಿರುವ ಪ್ರತಿಯೊಂದು ಗಿಡಕ್ಕೆ ರೂ. 30 ಪ್ರೋತ್ಸಾಹಧನ ನೀಡಲಾಗುವುದು. ಎರಡು ಮತ್ತು ಮೂರನೇ ವರ್ಷದ ಅಂತ್ಯದಲ್ಲಿ ಬದುಕಿರುವ ಪ್ರತಿಯೊಂದು ಗಿಡಕ್ಕೂ ಕ್ರಮವಾಗಿ ರೂ. 30 ಮತ್ತು ರೂ. 40 ಪ್ರೋತ್ಸಾಹ ಧನ ನೀಡಲಾಗುವುದು. ಈ ಪ್ರೋತ್ಸಾಹ ಧನವನ್ನು ರೈತರು ಗಿಡ ನೆಡುವಂತೆ ಪ್ರೋತ್ಸಾಹಿಸಲು ಮಾತ್ರವಲ್ಲ, ಕನಿಷ್ಠ ಮೂರು ವರ್ಷ ಅದನ್ನು ಪೋಷಿಸಬೇಕು ಎಂಬ ಉದ್ದೇಶದಿಂದ ನೀಡಲಾಗುತ್ತದೆ.

ಇಲಾಖೆಯು ನೀಡುವ ಒಟ್ಟು ರೂ. 100 ಪ್ರೋತ್ಸಾಹಧನ ಮೊತ್ತವು ರೈತರು ಸಸಿಯನ್ನು ಪಡೆದು, ನೆಡುವ ಕಾರ್ಯಕ್ಕೆ ಮಾಡುವ ವೆಚ್ಚವನ್ನು ಸರಿದೂಗಿಸುತ್ತದೆ. ರೈತರು ಹೆಚ್ಚಿನ ಸಂಖ್ಯೆಯಲ್ಲಿ ಗಿಡಗಳನ್ನು ನೆಟ್ಟರೆ ಪ್ರೋತ್ಸಾಹಧನ ಮೊತ್ತ ಸಾಕಷ್ಟು ಹೆಚ್ಚೇ ಇರುತ್ತದೆ. ಈ ರೀತಿಯ ಕಾರ್ಯಕ್ರಮದಿಂದ ರೈತರು ಆರ್ಥಿಕ ಪ್ರೋತ್ಸಾಹವನ್ನು ಪಡೆಯುವುದರ ಜೊತೆಗೆ ಬೆಳೆದ ಮರಗಳಿಂದ ಹಣ್ಣು, ಬೀಜ, ಮೇವು, ಉರುವಲು, ಕಂಬ, ಚೌಬೀನೆ ಮುಂತಾದ ರೂಪಗಳಲ್ಲಿ ಕೈತುಂಬ ಲಾಭವನ್ನು ಗಳಿಸುತ್ತಾರೆಂದು ಬೇರೆ ಹೇಳಬೇಕಾಗಿಲ್ಲ. ಕರ್ನಾಟಕದ ಒಳನಾಡು ಮತ್ತು ಪೂರ್ವದ ಬಯಲು ಪ್ರದೇಶಗಳಲ್ಲಿ **"ಕೃಷಿ ಅರಣ್ಯ ಪ್ರೋತ್ಸಾಹ ಯೋಜನೆ"**ಯು ಬಂಡವಾಳ ಹೂಡಿಕೆ ಮತ್ತು ಉಸ್ತುವಾರಿ ದೃಷ್ಟಿಯಿಂದ ಅರಣ್ಯ ಇಲಾಖೆಯ ಪ್ರಧಾನ ಯೋಜನೆಯಾಗಬೇಕು. ಜೈವಿಕ ದ್ರವ್ಯದ ಲಭ್ಯತೆ ಮತ್ತು



ಅರಣ್ಯ ಕೃಷಿಯ ಮೂಲಕ ಸೃಷ್ಟಿಯಾಗುವ ಹೆಚ್ಚುವರಿ ಆದಾಯವು ನೈಸರ್ಗಿಕ ಅರಣ್ಯಗಳ ಮೇಲೆ ಜನರ ಅವಲಂಬನೆಯನ್ನು ತಗ್ಗಿಸುತ್ತದೆ.

ನಮ್ಮ ನೈಸರ್ಗಿಕ ಅರಣ್ಯಗಳ ಮೇಲೆ ಇಂಥ ಜೈವಿಕ ಒತ್ತಡಗಳು ಇಳಿಮುಖವಾಗುವುದರಿಂದ ಅರಣ್ಯಗಳ ಪುನರುಜ್ಜೀವನಕ್ಕೆ ಸೂಕ್ತ ಸನ್ನಿವೇಶ ಸೃಷ್ಟಿಯಾಗುತ್ತದೆ. ಈ ಅರಣ್ಯಗಳು ತಮ್ಮ ಹಿಂದಿನ ವೈಭವವನ್ನು ಮರಳಿ ಗಳಿಸಲು ಇಲಾಖೆಯು ಮಾಡುವ ಪ್ರಯತ್ನಗಳು ಹೆಚ್ಚು ಪರಿಣಾಮಕಾರಿಯಾಗಿರುತ್ತವೆ.

ಕೃಷಿ–ಅರಣ್ಯ ಕಾರ್ಯಕ್ರಮದಡಿ ಬೇಕಾಗುವ ಸಸಿಗಳನ್ನು ಬೆಳೆಸುವ ಸಮಯದಲ್ಲಿ ರೈತರ ಆಯ್ಕೆ ಮತ್ತು ಆದ್ಯತೆಗಳಿಗೆ ಹೆಚ್ಚಿನ ಮಹತ್ವ ನೀಡಬೇಕು. ಎಣ್ಣೆಬೀಜ, ಹಣ್ಣುಗಳು, ಹೂ, ಔಷಧಿ, ರಾಳ ಮುಂತಾದವುಗಳನ್ನು ಪ್ರತಿವರ್ಷ ನೀಡುವಂತಹ ಮರದ ಪ್ರಭೇದಗಳಿಗೆ ಹೆಚ್ಚಿನ ಆದ್ಯತೆ ನೀಡಬೇಕು. ಕಡಿಮೆ ಕಾಲದಲ್ಲಿ ಸರದಿಯಲ್ಲಿ ಕಟಾವು ಮಾಡುವ ಸಿಲ್ವರ್ ಓಕ್, ಹೆಬ್ಬೇವಿನಂತಹ ಪ್ರಭೇದಗಳನ್ನು ಬೆಳೆಸಲು ಪ್ರೋತ್ಸಾಹಿಸಬೇಕು. ಸಾಧ್ಯವಾದೆಲ್ಲೆಡೆ ಬೇವು, ಕಿರಿಜಾಲಿ, ಹೊಂಗೆ, ಬಾಗೆ, ತೇಗ, ಶ್ರೀಗಂಧ ಮತ್ತು ಬಿದಿರು ಬೆಳೆಸಲು ಉತ್ತೇಜಿಸಬೇಕು. ಬಹುತೇಕ ಮರದ ಪ್ರಭೇದಗಳ ಕವಲುಗಳನ್ನು ಸವರುವುದರಿಂದ ಅವು ಪ್ರತಿವರ್ಷವೂ ಒಂದು ಮೊತ್ತದ ಉರುವಲು ನೀಡುತ್ತವೆ. ಕರ್ನಾಟಕದಲ್ಲಿ ರೇಷ್ಮೆ ಕೃಷಿಯು ಪ್ರಧಾನವಾದ ಚಟುವಟಿಕೆಯಾಗಿದ್ದು, ಅಪಾರವಾದ ಪ್ರಮಾಣದ ಭೂಪ್ರದೇಶದಲ್ಲಿ ಹಿಪ್ಪುನೇರಳೆಯನ್ನು ಬೆಳೆಯಲಾಗುತ್ತದೆ. ಸಾಮಾನ್ಯ ಹಿಪ್ಪುನೇರಳೆ ಗಿಡದಷ್ಟೆ ಮರದಂತೆ ಬೆಳೆಯುವ ಹಿಪ್ಪುನೇರಳೆ ಗಿಡವೂ ಎಲೆಯನ್ನು ಉತ್ಪಾದಿಸುವುದರಿಂದ ಹಿಪ್ಪುನೇರಳೆ ಮರಳೆಯು ಇತ್ತೀಚಿನ ದಿನಗಳಲ್ಲಿ ಜನಪ್ರಿಯವಾಗಿದೆ. ಆದುದರಿಂದ ಈ ಮರವನ್ನು ಸಹ ಕೃಷಿ–ಅರಣ್ಯದಲ್ಲಿ ಪ್ರೋತ್ಸಾಹಿಸಬೇಕು.

ಬೇವು, ಹೊಂಗೆ ಮುಂತಾದ ಮರಗಳು ಜೇನ್ನೊಣಗಳನ್ನು ಆಕರ್ಷಿಸುತ್ತವೆ. ಆ ಕಾರಣ, ಜೇನುಕೃಷಿಯನ್ನೂ ಪ್ರೋತ್ಸಾಹಿಸಬೇಕು. ಒಣಭೂಮಿ ತೋಟಗಾರಿಕೆಯೂ ಸೇರಿದಂತೆ ಕೃಷಿ–ಅರಣ್ಯವು ಎಲೆಯುದುರಿಸುವ ಮೂಲಕ ಅಪಾರ ಪ್ರಮಾಣದ ಜೈವಿಕ ದ್ರವ್ಯವನ್ನು ಉತ್ಪಾದಿಸುತ್ತದೆ. ಇದರ ಒಂದು ಭಾಗವನ್ನು ಜೈವಿಕ ಕೃಷಿಯ ಅಭಿವೃದ್ಧಿಗೆ ಬಳಸಬಹುದು. ಎರೆಹುಳು ಕಾಂಪೋಸ್ಟಿಂಗ್ ಮತ್ತೊಂದು ಆಯ್ಕೆ. ಕೃಷಿ ಜಮೀನಿನಲ್ಲಿ ಮೇವು ನೀಡುವ ಮರಗಳು ಮತ್ತು ಹೆಚ್ಚು ಇಳುವರಿ ನೀಡುವ ಮೇವು ಹುಲ್ಲುಗಳನ್ನು ಬೆಳೆಸುವುದರಿಂದ ಪಶುಸಂಗೋಪನೆಯ ಅಭಿವೃದ್ಧಿಗೆ ನೆರವಾಗಬಹುದು. ಒಟ್ಟಾರೆ, ಕೃಷಿ ಅರಣ್ಯ ಚಟುವಟಿಕೆಯು ಒಂದು ಸಮರ್ಥವಾದ ಹಾಗೂ ಚೈತನ್ಯಶೀಲ ಸಮಗ್ರ ಬೇಸಾಯ ವ್ಯವಸ್ಥೆಗಳ ಅಭಿವೃದ್ಧಿಗೆ ಅಪಾರ ಪ್ರಮಾಣದಲ್ಲಿ ಕಾಣಿಕೆ ಸಲ್ಲಿಸಬಹುದು.

♦

# ಕೃಷಿ ಅರಣ್ಯ ರೈತರ ಮತ್ತು ತಂತ್ರಜ್ಞರ ಸಂಸ್ಥೆಯಿಂದ ನಡೆದ ಕಾರ್ಯಕ್ರಮಗಳ ಬಗ್ಗೆ (ನವೆಂಬರ್– 2018 ರಿಂದ ಜೂನ್ 2019) ವರದಿ

✍ ಎ.ಎಂ. ಅಣ್ಣಯ್ಯ, ಕಾರ್ಯದರ್ಶಿ
ಕೃಷಿ–ಅರಣ್ಯ ರೈತರ ಮತ್ತು ತಂತ್ರಜ್ಞರ ಸಂಸ್ಥೆ, ಬೆಂಗಳೂರು ದೂ: 9448019306

**1)** ದಿ. 16.11.2018 ರಂದು ಚಿಕ್ಕಬಳ್ಳಾಪುರ ಸಾಮಾಜಿಕ ಅರಣ್ಯ ವಿಭಾಗದಿಂದ ಚಿಕ್ಕಬಳ್ಳಾಪುರದಲ್ಲಿ ನಡೆದ **'ಕೃಷಿ ಅರಣ್ಯ'** ಕಾರ್ಯಾಗಾರದಲ್ಲಿ ಸಂಸ್ಥೆಯ ಕಾರ್ಯದರ್ಶಿಳಾದ **ಶ್ರೀ ಎ.ಎಂ. ಅಣ್ಣಯ್ಯ** ಭಾಗವಹಿಸಿ ಅಧಿಕಾರಿಗಳಿಗೆ ಹಾಗು ರೈತರಿಗೆ ಕೃಷಿ ಅರಣ್ಯದ ಪ್ರಾಮುಖ್ಯತೆ ಬಗ್ಗೆ ಮಾಹಿತಿ ನೀಡಿದರು.

**2)** ದಿ. 30.11.2018 ರಂದು **ಕೃಷಿ ತಂತ್ರಜ್ಞ ಸಂಸ್ಥೆಯ** ಸಹ ಭಾಗಿತ್ವದಲ್ಲಿ ನಡೆದ **"ಕೃಷಿ ಅಭಿವೃದ್ಧಿಯಲ್ಲಿ ಕೃಷಿ ಅರಣ್ಯದ ಪಾತ್ರ"** ಎಂಬ ವಿಷಯದ ಬಗ್ಗೆ ಶ್ರೀ **ಎ.ಎಂ. ಅಣ್ಣಯ್ಯ ನವರು** ಉಪನ್ಯಾಸ ನೀಡಿದರು. ನಂತರ ವಿಚಾರ ವಿನಿಮಯ ನಡೆಯಿತು. ಸಂಸ್ಥೆಯ ಅಧ್ಯಕ್ಷರು, ಸಹ–ಅಧ್ಯಕ್ಷರು, ಕಾರ್ಯದರ್ಶಿಗಳು, ಸದಸ್ಯರಾದ **ಬಿ.ಶಿವನಗೌಡರು, ಶ್ರೀ ಎಸ್. ನಾರಾಯಣ ಸ್ವಾಮಿ ಹಾಗು ಸಹ ಸದಸ್ಯರಾದ ಎನ್. ಸ್ವಾಮಿರಾವ್** ರವರು ವಿಚಾರ ವಿನಿಮಯದಲ್ಲಿ ಪಾಲ್ಗೊಂಡಿದ್ದರು.

**3)** ದಿ. 05.12.2018 ರಂದು ಮೈಸೂರು ಮೃಗಾಲಯದಲ್ಲಿ ವಿದ್ಯಾರ್ಥಿಗಳು, ಅರಣ್ಯಧಿಕಾರಿಗಳು ಹಾಗು ಕೃಷಿ ಆಸಕ್ತರಿಗೆ **'ಕೃಷಿ ಅರಣ್ಯ'**ದ ಬಗ್ಗೆ ಕಾರ್ಯದರ್ಶಿಗಳಾದ ಶ್ರೀ **ಎ.ಎಂ.ಅಣ್ಣಯ್ಯ** ಅವರು ಉಪನ್ಯಾಸ ನೀಡಿದರು.

**4)** ದಿ. 13.12.2018 ಹಾಗು 14.12.2018 ರಂದು ಕೇಂದ್ರ ಸರ್ಕಾರದ **"Directorate of Cashew and Coco Development"** ಸಂಸ್ಥೆಯ ಸದಸ್ಯರಿಗೆ ಮಂಡ್ಯ ಜಿಲ್ಲೆಯಲ್ಲಿ ಕೃಷಿ ವಿಜ್ಞಾನ ಪದವೀದರರ ಸಂಘದ ವತಿಯಿಂದ ರೈತರ ಜಮೀನಿನಲ್ಲಿ ಬೆಳೆಸಿರುವ **ಗೋಡಂಬಿ ಪ್ರಾತ್ಯಕ್ಷಿತೆ ಪ್ಲಾಟುಗಳಿಗೆ** ಕಾರ್ಯದರ್ಶಿಗಳು ಬೇಟಿ ಮಾರ್ಗದರ್ಶನ ನೀಡಿರುತ್ತಾರೆ.

**5)** ದಿ 22.12.2018 ರಂದು **ಸರ್ವ ಸದಸ್ಯರ ಮಹಾ ಸಭೆಯನ್ನು** ಮಲ್ಲೇಶ್ವರಂ ಅರಣ್ಯ ಭವನದಲ್ಲಿ ನಡೆಸಲಾಯಿತು. ಸಭೆಗೆ ಮುನ್ನ ಲಾವೋಸ್‌ನಲ್ಲಿ ಹಠಾತ್ ನಿಧನರಾದ ಈ ಸಂಘದ ದಕ್ಷ ಹಾಗು ಚಟುವಟಿಕೆ ಶೀಲ ಅಧ್ಯಕ್ಷರಾಗಿದ್ದ **ಶ್ರೀ ಎ.ಎಸ್. ಸದಾಶಿವಯ್ಯನವರಿಗೆ** ಶ್ರದ್ಧಾಂಜಲಿ ಸಭೆ ನಡೆಸಲಾಯಿತು.

6) ದಿ. 28.12.2018 ರಂದು FTATI ಕಾಡುಗೋಡಿ ಬೆಂಗಳೂರಿನಲ್ಲಿ ACF ಮತ್ತು RFO ಅವರುಗಳಿಗೆ ಅರಣ್ಯ ಒತ್ತುವರಿ ತೆರವು ಹಾಗು ಕೃಷಿ ಅರಣ್ಯದ ಬಗ್ಗೆ ತರಬೇತಿ ನೀಡಲಾಯಿತು.

7) ದಿ 29.12.2018 ರಂದು Marappa Memorial awards ಗಳನ್ನು Marappa Memorial Trust ಹಾಗು ನಮ್ಮ ಸಂಸ್ಥೆಯ ಸಹ ಭಾಗಿತ್ವದಲ್ಲಿ ಅರಣ್ಯ ಸಿಬ್ಬಂದಿಗಳಿಗೆ ಅರಣ್ಯ ಭವನದಲ್ಲಿ ನೀಡಲಾಯಿತು.

8) ಜನವರಿ 2019 ರ ಮಾಹೆಯಲ್ಲಿ ರಾಜ್ಯದ ಚಾಮರಾಜನಗರ, ಮೈಸೂರು, ಕೊಡಗು, ಮಂಗಳೂರು, ಹಾಸನ, ಚಿಕ್ಕಮಗಳೂರು, ಶಿವಮೊಗ್ಗ, ಶಿರಸಿ, ಬೆಳಗಾವಿ, ಧಾರವಾಡ, ಕಲಬುರ್ಗಿ ಹಾಗು ಬಳ್ಳಾರಿ ಅರಣ್ಯ ವೃತ್ತಗಳಲ್ಲಿ ಹಾಗು ಧಾರವಾಡದ ಗುಂಗರಗಟ್ಟಿಯಲ್ಲಿ ಕರ್ನಾಟಕ ಅರಣ್ಯ ಅಕಾಡೆಮಿಯಲ್ಲಿ ಅರಣ್ಯಾಧಿಕಾರಿಗಳಿಗೆ, ಅರಣ್ಯ ವತ್ತುವರಿ ತೆರವು ಹಾಗು ಕೃಷಿ ಅರಣ್ಯದ ಬಗ್ಗೆ 13 ತರಬೇತಿ/ಕಾರ್ಯಾಗಾರಗಳ ಸಂಘದ ಕಾರ್ಯದರ್ಶಿಗಳಾದ **ಶ್ರೀ ಎ.ಎಂ.ಅಣ್ಣಯ್ಯನವರು** ಕರ್ನಾಟಕ ಅರಣ್ಯ ಇಲಾಖೆಯ ಸಹ ಭಾಗಿತ್ವದಲ್ಲಿ ನಡೆಸಿದರು.



9) ದಿ. 25.01.2019 ರಂದು ಬೆಳಗಾವಿ ಜಿಲ್ಲಾ, ರಾಯದುರ್ಗ ತಾ. ಕಟಕೋಳ ಗ್ರಾಮದಲ್ಲಿ **ಶ್ರೀಮತಿ ಸುವರ್ಣ ಹಾಗು ಶ್ರೀ ಅಪ್ಪಯ್ಯಪ್ಪ** ಇವರು ಬೆಳೆಸಿರುವ **"ಕೃಷಿ–ತೋಟಗಾರಿಕೆ–ಅರಣ್ಯ"** ನೆಡು ತೋಪುಗಳಿಗೆ ಸಂಸ್ಥೆಯ ಕಾರ್ಯದರ್ಶಿ **ಶ್ರೀ ಎ.ಎಂ. ಅಣ್ಣಯ್ಯ** ಹಾಗು ಬೆಳಗಾವಿ ವಿಭಾಗದ ಅರಣ್ಯದಿಕಾರಿಗಳೊಡನೆ ಬೇಟಿ ನೀಡಿ ಸಲಹೆ ಸೂಚನೆ ನೀಡಿದ್ದಾರೆ. ಈ ಕೃಷಿ ಅರಣ್ಯವನ್ನು ಬರಡು ಭೂಮಿಯಲ್ಲಿ ನಿರ್ಮಿಸಿದ್ದು ಶ್ರೀಗಂಧ, ಹೊಂಗೆ, ಮಾವು(8 ವರ್ಷ ಹಾಗು 2 ವರ್ಷದ ನೆಡು ತೋಪುಗಳು) ಉತ್ತಮವಾಗಿ ಬೆಳೆದು ಮಾದರಿ ಕೃಷಿ–ಅರಣ್ಯ ಪ್ರಾತ್ಯಕ್ಷಿತೆ ಪ್ಲಾಟ್ ಆಗಿರುತ್ತದೆ. ಇದಕ್ಕೆ ಖಾನಪುರ ಉಪ ವಿಭಾಗದ **ACF** ಅವರು **ಶ್ರೀ ಎನ್.ಬಿ.ಪಾಟೀಲ್** ಇವರ ಮಾರ್ಗದರ್ಶನ ಮೆಚ್ಚುವಂತಹ ವಿಷಯವಾಗಿದೆ.

10) **Sandalwood Society of India** ಸಂಸ್ಥೆಯು ಕರ್ನಾಟಕ **IWST,** ಕೃಷಿ, ತೊಟಗಾರಿಕೆ, ಕೈಗಾರಿಕೆ ಹಾಗು ವಾಣಿಜ್ಯ, ಆಯುಷ, **IAFT,** ಹಾಗು ಕೆಲವು ಕೈಗಾರಿಕೆ ಸಂಸ್ಥೆಗಳೊಡನೆ ಸಹಭಾಗಿತ್ವದಲ್ಲಿ ಆಂಯೋಜಿಸಲಾಗಿದ **"National Conference on Sandalwood"** ಇದರಲ್ಲಿ ದಿ 25.02.2019 ರಂದು ಬೆಳೆಗ್ಗೆ 10:00 ರಿಂದ ಸಂಜೆ 7:00 ಗಂಟೆಯವರೆಗೆ **J.N. Tata Auditorium, IISC Campus** ಮಲ್ಲೇಶ್ವರಂ, ಬೆಂಗಳೂರು ಇಲ್ಲಿ IAFT ಸಂಸ್ಥೆಯು ಕಾರ್ಯದರ್ಶಿಗಳಾದ ಶ್ರೀ ಎ.ಎಂ. ಅಣ್ಣಯ್ಯ, ಸಹ–ಕಾರ್ಯದರ್ಶಿಗಳಾದ ಡಾ॥ ಮಹಾದೇವ ಮೂರ್ತಿ, ಕಾರ್ಯಕಾರಿ ಸಮಿತಿಯ ಸದಸ್ಯರುಗಳಾದ ಶ್ರೀ ಸಿದ್ದೇಗೌಡ, ಶ್ರೀ ಬಿ.ಎಸ್. ರಘುನಾಥ, ಡಾ॥ ಸ್ವಾಮಿ ರಾವ್ ಭಾಗವಹಿಸಿದ್ದರು.

11) ದಿ. 22.03.2019 ರಂದು ಸದಸ್ಯರಾದ **ಮಾನ್ಯ ಶಾಂತವೀರಯ್ಯ** ಮತ್ತು ಕಾರ್ಯದರ್ಶಿಗಳೂ ಅರಕಲಗೂಡು ತಾ. ಚಿಕ್ಕ ಮೊಗ್ಗೆ ಗ್ರಾಮದಲ್ಲಿ ಶ್ರೀ **ಎಮ್.ಸಿ.ರಂಗಸ್ವಾಮಿ** ಮತ್ತು ಸಹೋದರರ ಏಲಕ್ಕಿ ತೋಟದಲ್ಲಿ 20 ಜೇನು ಪೆಟ್ಟಿಗೆಗಳನ್ನು ಜೇನು ಸಮೇತ ಅಳವಡಿಸಲಾಯಿತು. ♦

# ಜೇನು ಕೃಷಿಯ ಆರ್ಥಿಕತೆ

✍ ಶ್ರೀ.ಎ.ಕೆ.ಸಿಂಗ್ ಭಾ.ಅ.ಸೇ.
ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ, ಹಾಸನ

**ಜೇ**ನುಕೃಷಿಯು ಅಧಿಕ ಲಾಭಾಂಶ ತರುವ 'ಹಸಿರು ವ್ಯವಹಾರ'. ಅಲ್ಲದೇ ಅನೇಕ ವರ್ಷಗಳ ಕಾಲ ಅದಕ್ಕೆ ಮಾಡುವ ವೆಚ್ಚವೂ ಅತ್ಯಲ್ಪ. ಪ್ರಸ್ತುತ **ಏಪಿಸ್ ಮೆಲಿಫೆರ, ಏಪಿಸ್ ಡಾರ್ಸೆಟ, ಏಪಿಸ್ ಫ್ಲೋರಿಯಾ** ಮತ್ತು **ಏಪಿಸ್ ಸೆರನ** ಎಂಬ ಮುಂತಾದ **ಏಳು ಜೇನು** ಪ್ರಭೇದಗಳನ್ನು ಜೇನು ಉತ್ಪಾದಿಸುವ ಹಾಗೂ ಪರಕೀಯ ಪರಾಗಸ್ಪರ್ಶ ಉಂಟುಮಾಡುವ ಉತ್ತಮ ಪ್ರಭೇದಗಳೆಂದು ಗುರುತಿಸಿ ಸಾಕಾಲಾಗುತ್ತಿದೆ. ಜಗತ್ತಿನಲ್ಲಿರುವ 20,000 ದುಂಬಿ ಪ್ರಭೇದಗಳಲ್ಲಿ ಜೇನ್ನೊಣಗಳು ಪ್ರಭೇದಗಳ ಸಂಖ್ಯೆ ಅತ್ಯಲ್ಪ. ಜಗತ್ತಿನಲ್ಲಿರುವ ಬೇರೆ ಬೇರೆ ದುಂಬಿಗಳೊಡನೆ ಅಡ್ಡಹಾಯಿಸಿ ಉತ್ತಮ ಸಾಮರ್ಥ್ಯದ ತಳಿಗಳನ್ನು ಪಡೆದು ಪರಕೀಯ ಪರಾಗಸ್ಪರ್ಶ. ಜೇನುತುಪ್ಪ ಉತ್ಪಾದನೆ, ಮುಂತಾದವುಗಳನ್ನು ವಾಣಿಜ್ಯ ಪ್ರಮಾಣಕ್ಕೆ ವೃದ್ಧಿಸಲು ಪ್ರಯತ್ನಿಸಬಹುದಾಗಿದೆ.

ಜೇನುಕೃಷಿಯು ನಮಗೆ ಬೇಕಾದ ಜೇನು ಪ್ರಭೇದಗಳನ್ನು ಸಂಗ್ರಹಿಸಿ ಅವುಗಳೊಡನೆ ಒಡನಾಡುವ ಒಂದು ಕಲೆ. ಇದು ಆ ಪ್ರಭೇದಗಳನ್ನು ನಿರ್ದಿಷ್ಟ ಹಾಗೂ ಪ್ರಮಾಣಬದ್ಧ ಪೆಟ್ಟಿಗೆಗಳಲ್ಲಿ ಸಾಕುವುದು, ಸೂಕ್ತವಾದ ಪ್ರದೇಶಗಳಲ್ಲಿ ಅವುಗಳನ್ನು ಪೋಷಿಸುವುದು. ಅವುಗಳ ಸೂಕ್ತ ಪ್ರಮಾಣದ ಸಂಖ್ಯೆಯನ್ನು ವರ್ಷಪೂರ್ತಿ ವೈಜ್ಞಾನಿಕವಾಗಿ ನಿರ್ವಹಿಸುವುದು ಸಹ ಈ ಕಲೆಯಲ್ಲಿ ಸೇರಿದೆ. ಜೇನುನೊಣಗಳು ನಿರ್ವಹಿಸುವ ಜೀವಪರಿಸರಾತ್ಮಕ ಸರಕು ಮತ್ತು ಸೇವೆಗಳನ್ನು, ಅವುಗಳಿರುವ ವಿವಿದೋದ್ದೇಶಗಳನ್ನು ಬೆಳೆಗಳ ಉತ್ಪಾದನೆ ಮತ್ತು ಜೇನುತುಪ್ಪದ ಉತ್ಪಾದನೆಗೆ ಅನುಕೂಲಕರವಾಗಿ ಬಳಸಿಕೊಳ್ಳಬಹುದು. ಆದುದರಿಂದ ಅಪಾರವಾದ ಲಾಭವನ್ನು ಗಳಿಸಲು ಮತ್ತು ಪರಿಸರಾತ್ಮಕ ಸೇವೆಗಳ ವೃದ್ಧಿಯಂಥ ಈ ಹಸಿರು ವ್ಯವಹಾರವನ್ನು ಆರಂಭಿಸಲು ಬೇಕಾಗಿರುವುದು ಅಲ್ಪ ಪ್ರಮಾಣದ ಕೌಶಲ್ಯ ಮಾತ್ರ. ಈ ಲಾಭ ತರುವ ಉದ್ದಿಮೆಯನ್ನು ನಿರ್ವಹಿಸಲು ನಾವು ಲಕ್ಷಾಂತರ ಕುಶಲಿಗಳನ್ನು ತರಬೇತುಗೊಳಿಸಬಹುದು. ಜೇನು ಕೃಷಿಯನ್ನು ಬೇರೆ ಬೇರೆ ಉದ್ದೇಶಗಳಿಗೆ ವಿಸ್ತರಿಸುವ ಮೂಲಕ ನೂರಾರು ವ್ಯವಹಾರಗಳನ್ನು ಆರಂಭಿಸಲು ಅಗಾಧವಾದ ಸಾಧ್ಯತೆಗಳಿವೆ. ಜೇನುತುಪ್ಪ ಮಾತ್ರವಲ್ಲದೆ, ಜೇನು ಪರಾಗ, ಬೀ ಪ್ರೊಪೆಲ್, ಬೀ ವೇ, ಜೇನು ವಿಷ, ರಾಯಲ್ ಜೆಲ್ಲಿ ಮತ್ತು ಜೇನುಹುಟ್ಟು ಬೇಲಿ ಮುಂತಾದ ಜೇನು ಉತ್ಪಾದನೆಗಳನ್ನು ಉತ್ಪಾದಿಸಲು ಮತ್ತು ಮಾರಾಟ ಮಾಡಲು ಜೇನುಕೃಷಿ ಅವಕಾಶ ಕಲ್ಪಿಸುತ್ತದೆ.

ಆಧುನಿಕ ಸಾಧನಗಳು ಮತ್ತು ತಂತ್ರಜ್ಞಾನಗಳ ನೆರವಿನಿಂದ ಅಗತ್ಯವಿರುವ ಸಮಯದಲ್ಲಿ ಕೃಷಿ ಮತ್ತು ತೋಟಗಾರಿಕೆ ಬೆಳೆಗಳ ಪರಾಗಸ್ಪರ್ಶಕ್ಕೆ, ತರಕಾರಿಗಳಲ್ಲಿ ಹೈಬ್ರಿಡ್ ಬೀಜ ಉತ್ಪಾದನೆಗೆ, ಇತರ ಜೇನುನೊಣ ಆಧರಿಸಿದ ಪರಾಗಸ್ಪರ್ಶದ ಬೆಳೆಗಳಿಗೆ, ಹಾಗೆಯೇ ಮಾರುಕಟ್ಟೆಯಲ್ಲಿ ಅಧಿಕ ಬೇಡಿಕೆ ಇರುವ ವಸ್ತುಗಳನ್ನು ಅಂದರೆ ರಾಣಿಜೇನು, ಪ್ಯಾಕೇಜ್ ಬೀಸ್, ವಿವಿಧ ಔಷಧಿ ತಯಾರಿಕ ಸಂಸ್ಥೆಗಳಲ್ಲಿ ಜೇನು ಬಳಕೆಗೆ, ಜೇನು ನೊಣಗಳನ್ನು ಬಳಸಬಹುದು.

ವಾಣಿಜ್ಯ ಮಟ್ಟದಲ್ಲಿ ಜೇನುಕೃಷಿ ಮಾಡುವವರು ಏಪಿಲ್ ಮೆಲಿಫೆರ ಪ್ರಭೇದವನ್ನು ಸಾಕುತ್ತಾರೆ. ಈ ಪ್ರಭೇದದ ರಾಣಿ ಜೇನು ತುಪ್ಪ ಹೆಚ್ಚು ಇರುವ ಕಾಲದಲ್ಲಿ ಒಂದು ದಿನಕ್ಕೆ 2000 ಮೊಟ್ಟೆ ಇಡುವ ಸಾಮರ್ಥ್ಯ ಪಡೆದಿದೆ. ಆದುದರಿಂದ ಜೇನು ಹುಟ್ಟುಗಳಲ್ಲಿನ ಸಂಖ್ಯೆ ಉತ್ತಮವಾಗಿರುತ್ತದೆ. ಹರಿಯಾಣದಲ್ಲಿರುವ 28,000 ಕಾಲನಿಗಳಿಂದಲೇ ವಾರ್ಷಿಕ 4100 ಮೆಟ್ರಿಕ್ ಟನ್ ಜೇನುತುಪ್ಪ ಉತ್ಪಾದನೆಯಾಗುತ್ತದೆ. ಭಾರತದಲ್ಲಿ ಒಂದು ಹೆಕ್ಟೇರ್‌ಗಿಂತ ಕಡಿಮೆಯಿರುವ ಭೂಹಿಡುವಳಿದಾರರ ಸಂಖ್ಯೆಯೇ ಅಧಿಕ, ಜೇನು ಸಾಕಣೆ ಉದ್ದಿಮೆಯು ಜೇನು ಹುಟ್ಟಿನ ಉತ್ಪನ್ನಗಳಿಂದ ಬಹಳಷ್ಟು ಆರ್ಥಿಕ ಪ್ರತಿಫಲ ನೀಡುತ್ತದೆ. **ಜೇನುಹುಟ್ಟಿನ ಉತ್ಪನ್ನಗಳು ಪರಾಗಸ್ಪರ್ಶದ** ಮೂಲಕ ಪ್ರತಿವರ್ಷವೂ ರೂ. 30 ಬಿಲಿಯನ್ ಮೌಲ್ಯದ ಬೆಳೆ, ತರಕಾರಿ ಮತ್ತು ಹಣ್ಣುಗಳ ಉತ್ಪಾದನೆಗೆ ಕಾರಣವಾಗಿದೆ. ಅಲ್ಲದೆ ಮೂವತ್ತು ಲಕ್ಷ ಸ್ವಯಂ ಉದ್ಯೋಗ ಅವಕಾಶಗಳಿಗೆ ಬಾಗಿಲು ತೆರೆಯುತ್ತದೆ. ಜೇನು ನೊಣಗಳು ಮತ್ತು ಅವು ನಿರ್ವಹಿಸುವ ಪರಾಗಸ್ಪರ್ಶ ಕೊಡುಗೆಯನ್ನು ಒಟ್ಟಾಗಿ ಪರಿಗಣಿಸಿದರೆ, ಜಗತ್ತಿನ ಕೃಷಿ ಉತ್ಪಾದನೆಗೆ





ಅವು ಪ್ರತಿವರ್ಷ ಅಂದಾಜು 200 ಬಿಲಿಯನ್ ಡಾಲರ್ ಮೌಲ್ಯದ ಕೊಡುಗೆ ನೀಡುತ್ತವೆ. 2020ರ ವೇಳೆಗೆ 10 ಮಿಲಿಯನ್ ಕಾಲೋನಿಗಳಿವೆ. ಭಾರತವು ತನ್ನಲ್ಲಿ ಲಭ್ಯವಿರುವ ಹೂ ಸಂಪನ್ಮೂಲದಲ್ಲಿ ಶೇ. 28ರಷ್ಟು ಪ್ರಮಾಣವನ್ನು ಲಾಭದಾಯಕವಾಗಿ ಬಳಸಿಕೊಳ್ಳಬಹುದು. ಭಾರತವು ಪ್ರತಿವರ್ಷ 72,000 ಟನ್ ಜೇನುತುಪ್ಪವನ್ನು ಉತ್ಪಾದಿಸುತ್ತಿದೆ. ಇದರಲ್ಲಿ ಜಗತ್ತಿನ 47 ದೇಶಗಳಿಗೆ 32,000 ಟನ್ ಜೇನನ್ನು ರಫ್ತು ಮಾಡುತ್ತಿದ್ದು, ಭಾರತದ ಆರ್ಥಿಕತೆಗೆ ರೂ. 16 ಮಿಲಿಯನ್‌ಗಳನ್ನು ನೀಡುತ್ತಿದೆ. ಭಾರತದಲ್ಲಿ ಒಟ್ಟು ಬೆಳೆ ಬೆಳೆಯುವ ಪ್ರದೇಶ 150 ಮಿಲಿಯನ್ ಹೆಕ್ಟೇರುಗಳಷ್ಟಿದೆ. ಇದರಲ್ಲಿ 20 ಮಿಲಿಯನ್ ಹೆಕ್ಟೇರು ಪ್ರದೇಶದಲ್ಲಿ ತೋಟಗಾರಿಕೆ ಬೆಳೆಗಳಿವೆ. 76 ಮಿಲಿಯನ್ ಹೆಕ್ಟೇರು ಅರಣ್ಯ ಪ್ರದೇಶ ಮತ್ತು 65 ಮಿಲಿಯನ್ ಹೆಕ್ಟೇರು ಬೀಳುಭೂಮಿಯಾಗಿದೆ. ಸುಮಾರು ಶೇ. 80 ಹೂವರಳಿಸುವ ಬೆಳೆಗಳು ತಮ್ಮ ಸಂಪೂರ್ಣ ಉತ್ಪಾದನಾ ಸಾಮರ್ಥ್ಯ ತಲುಪಲು ಜೇನುನೊಣ ಮತ್ತು ಕೀಟಗಳಿಂದಾಗುವ ಪರಾಗಕ್ರಿಯೆಯನ್ನು ಅವಲಂಬಿಸಿವೆ.

ಒಂದು ಜೇನುಪೆಟ್ಟಿಗೆಯ ವೆಚ್ಚ ರೂ. 3500 ಮಾತ್ರ. ಆದುದರಿಂದ ಆವರ್ತ ವೆಚ್ಚವೂ ಸೇರಿದಂತೆ ನೂರು ಪೆಟ್ಟಿಗೆಗಳ ಒಟ್ಟು ವೆಚ್ಚ 3.5 ಲಕ್ಷ. ಕೂಲಿ, ಸಾಗಾಣಿಕೆ, ಪೀಡೆ ಸಂರಕ್ಷಣ ಇತ್ಯಾದಿ ವೆಚ್ಚ ಸೇರಿಸಿದರೆ ರೂ. 4.00 ಲಕ್ಷಗಳಾಗುತ್ತದೆ. ಪ್ರತಿ ಪೆಟ್ಟಿಗೆಯಲ್ಲಿ ಒಂದು ವರ್ಷಕ್ಕೆ 40 ಕೆ.ಜಿ. ಜೇನುತುಪ್ಪ ಉತ್ಪಾದನೆಯಾಗುತ್ತದೆಂದು ಭಾವಿಸಿದರೂ, ನೂರು ಪೆಟ್ಟಿಗೆಯಿಂದ ವಾರ್ಷಿಕ 4000 ಕೆ.ಜಿ. ತುಪ್ಪ ಉತ್ಪಾದನೆಯಾಗುತ್ತದೆ. ಪ್ರತಿ ಕೆ.ಜಿ.ಯ ಬೆಲೆ ರೂ. 350 ಎಂದು ಭಾವಿಸಿದರೂ 100 ಘಟಕಗಳಿಂದ ಪ್ರತಿವರ್ಷ ರೂ. 14 ಲಕ್ಷ ಆದಾಯ ಬರುತ್ತದೆ. ಕಡಿಮೆ ಬಂಡವಾಳ ಹೂಡಿಕೆಗೆ ಹೋಲಿಸಿದರೆ ಪಡೆಯುವ ಲಾಭ ಅಧಿಕವಾಗಿಯೇ ಇದೆ. ವಿಶೇಷ ಘಟಕ ಯೋಜನೆ ಮತ್ತು ಬುಡಕಟ್ಟು ಉಪಯೋಜನೆಯಡಿಯಲ್ಲಿ ಸರ್ಕಾರವು ಉಚಿತವಾಗಿ ಎಲ್ಲ ಮೂಲಭೂತ ಸೌಲಭ್ಯಗಳನ್ನು ಹಾಗೂ ಜೊತೆಗೆ ಅಂಚಿನ ಸಮುದಾಯಗಳಿಗೆ ಸಾಮರ್ಥ್ಯ ನಿರ್ಮಾಣ ಮತ್ತು ಕೌಶಲ್ಯ ಸುಧಾರಣೆಯನ್ನು ಒದಗಿಸುತ್ತಿದೆ. ಆರೋಗ್ಯ ಕಾಳಜಿ ಹೆಚ್ಚಾಗುತ್ತಿರುವುದರಿಂದ ಪ್ರತಿವರ್ಷ ಆದಂತೆಲ್ಲ ಜೇನುತುಪ್ಪದ ಮಾರುಕಟ್ಟೆ ಅಗಾಧ ಪ್ರಮಾಣದಲ್ಲಿ ವಿಸ್ತರಿಸುತ್ತಿದೆ. ಪ್ರಕೃತಿ ಸಹಜ ಜೀವನದ ಆಯುರ್ವೇದ ಜೀವನ ಶೈಲಿ ಜನಪ್ರಿಯವಾಗುತ್ತಿದೆ. ಜೇನುತುಪ್ಪ ಉತ್ಪಾದನೆಯಲ್ಲಿ ಜಗತ್ತಿನಲ್ಲಿ ಭಾರತಕ್ಕೆ 7ನೇ ಸ್ಥಾನ ಲಭಿಸಿದ್ದು, ಔಷಧ ಸಂಸ್ಥೆಗಳಿಗೆ ಚಾಕೋಲೇಟ್ ಮತ್ತು ಆಹಾರ ಉದ್ದಿಮೆಗಳಿಗೆ ಜೇನುತುಪ್ಪ ಒದಗಿಸುವ ಅಂಚಿನ ರೈತ ಸಮುದಾಯದಲ್ಲಿ 3 ಲಕ್ಷ ಉದ್ಯೋಗ ಸೃಷ್ಟಿಸಿದೆ. ಈ ನಿಟ್ಟಿನಲ್ಲಿ ಜೇನು ಕೃಷಿಯಲ್ಲಿ ತೊಡಗಿಸಿಕೊಳ್ಳಲು ಇದು ಸಕಾಲ.

ಹಾಗೂ ಪರಕೀಯ ಪರಾಗಸ್ಪರ್ಶ ಉಂಟುಮಾಡುವ ಉತ್ತಮ ಪ್ರಭೇದಗಳೆಂದು ಗುರುತಿಸಿ ಸಾಕಾಲಾಗುತ್ತಿದೆ. ಜಗತ್ತಿನಲ್ಲಿರುವ 20,000 ದುಂಬಿ ಪ್ರಭೇದಗಳಲ್ಲಿ ಜೇನ್ನೊಣಗಳು ಪ್ರಭೇದಗಳ ಸಂಖ್ಯೆ ಅತ್ಯಲ್ಪ. ಜಗತ್ತಿನಲ್ಲಿರುವ ಬೇರೆ ಬೇರೆ ದುಂಬಿಗಳೊಡನೆ ಅಡ್ಡಹಾಯಿಸಿ ಉತ್ತಮ ಸಾಮರ್ಥ್ಯದ ತಳಿಗಳನ್ನು ಪಡೆದು ಪರಕೀಯ ಪರಾಗಸ್ಪರ್ಶ. ಜೇನುತುಪ್ಪ ಉತ್ಪಾದನೆ, ಮುಂತಾದವುಗಳನ್ನು ವಾಣಿಜ್ಯ ಪ್ರಮಾಣಕ್ಕೆ ವೃದ್ಧಿಸಲು ಪ್ರಯತ್ನಿಸಬಹುದಾಗಿದೆ.

◆

ಡಾ॥ ಎಸ್.ಎಂ.ಶಾಂತವೀರಯ್ಯ ಜೇನು ಕೃಷಿತಜ್ಞರು,
ಮೇಟಿಕುರ್ಕೆ, ಹಿರಿಯೂರು ತಾ॥
ಚಿತ್ರದುರ್ಗ ಜಿಲ್ಲೆ,
ಮೊ: 9449726068

# ಜೇನು ಸಾಕಾಣಿಕೆ



## ಜೇನು ಸಾಕಾಣಿಕೆ ಎಂದರೇನು?

ಗಿಡ, ಮರ, ಬಳ್ಳಿ, ಕಳೆ ಇತ್ಯಾದಿಯಾಗಿ ಎಲ್ಲ ಸಸ್ಯಗಳು ತಮ್ಮ ಪರಾಗ ಮತ್ತು ಮಕರಂದಗಳು ಜೇನ್ನೊಣಗಳಿಗೆ ಆಹಾರಗಳು.

ಜೇನು ನೊಣಗಳು ತಾವು ಬದುಕಲು ತಮ್ಮ ಸಂತಾನ ಬೆಳೆಸಲು ಸಸ್ಯಗಳ ಹೂ ಗಳಲ್ಲಿರುವ ಪರಾಗ ಮತ್ತು ಮಕರಂದಗಳನ್ನು ಸಂಗ್ರಹಿಸುತ್ತವೆ, ಹಾಗೆ ಮಾಡುವಾಗ ಸಸ್ಯಗಳಲ್ಲಿ ಒಂದು ಹೂವಿನಿಂದ ಮತ್ತೊಂದು ಹೂವಿಗೆ ಪರಾಗ ಸ್ಪರ್ಶ ಆಗಿ ಸಂತಾನಾಭಿವೃದ್ಧಿ ಅರ್ಥಾತ್ ಹಣ್ಣು, ಕಾಯಿ, ಗೆಡ್ಡೆ, ಗೆಣಸು, ಮೇವು ಇತ್ಯಾದಿಯಾಗಿ ಮಾನವ ಮತ್ತು ಪಶು ಪ್ರಾಣಿಗಳಿಗೆ ಬೇಕಾಗುವ ಆಹಾರ ದೊರೆಯುತ್ತದೆ.

ಜೇನು ಕುಟುಂಬಗಳನ್ನು ತಮ್ಮ ಮೂಲ ನೆಲೆಯಲ್ಲಿರುವಂತಹುದೇ ಸನ್ನಿವೇಶದಲ್ಲಿ (ಜೇನು ಪೆಟ್ಟಿಗೆ) ಅವುಗಳ ದುಡಿಮೆಗೆ ಸೂಕ್ಷ್ಮ ಅವಕಾಶಗಳನ್ನು ಕಲ್ಪಿಸಿ ಅವುಗಳಿಂದ ದೊರೆಯುವ ಅಪರಿಮಿತ ಲಾಭಗಳನ್ನು ನಮ್ಮದಾಗಿಸಿ ಕೊಳ್ಳುವುದೇ ಜೇನು ಸಾಕಾಣಿಕೆ.

## ಯಾರು ಜೇನು ಸಾಕಾಣಿಕೆ ಎಲ್ಲಿ ಮಾಡಬಹುದು?

ಎಳೆಯರು, ಮುದುಕರು, ಮಹಿಳೆಯರು, ವಿದ್ಯಾವಂತರು, ಅವಿದ್ಯಾವಂತರು ಇತ್ಯಾದಿ ಆಸಕ್ತಿ ಇರುವ ಎಲ್ಲ ವರ್ಗದ ಜನರು ಜೇನು ಸಾಕಾಣಿಕೆಯನ್ನು ಮಾಡಬಹುದು.

ಜೇನು ಸಾಕಾಣಿಕೆಯಿಂದ ಕೃಷಿ, ತೋಟಗಾರಿಕೆ, ಅರಣ್ಯ, ಮೇವು, ಔಷದಿ ಮತ್ತು ನೈಸರ್ಗಿಕವಾದ ಕೈಗಾರಿಕೆ ಮೂಲ ವಸ್ತುಗಳನ್ನು ಸಸ್ಯಗಳಿಂದ ಪಡೆಯಲು ಪರಾಗಸ್ಪರ್ಶದ ಲಾಭ ದೊರೆಯುತ್ತವೆ. ಜೇನುಗೂಡಿನಿಂದ ದೊರೆಯುವ ಜೇನು ತುಪ್ಪ, ಜೇನು ಮೇಣ ಪರಾಗ, ಜೇನಂಟು, ರಾಜಶಾಹಿ ರಸ ಮತ್ತು ಜೇನು ವಿಷ ಆರ ಅದ್ಭುತ ವಸ್ತುಗಳಿಂದ ಕೂಡಿರುತ್ತದೆ.

1. ಸಕಲ ಪೋಷಕಾಂಶ ಭರಿತ ಅಮೃತ ಸಮಾನ ನೈಸರ್ಗಿಕ ಆಹಾರ.
2. ಬಹುತೇಕ ಕಾಯಿಲೆಗಳಿಗೆ ಯಾವುದೇ ಅಡ್ಡ ಪರಿಣಾಮ ಬೀರದ ಔಷಧಿ.
3. ಔಷಧಿ ಸಹಿತ ಅನೇಕ ಕೈಗಾರಿಕೆಗಳಿಗೆ ಮೂಲ ವಸ್ತುಗಳು ದೊರೆಯುತ್ತದೆ.
4. ಯಾವುದೇ ಹೆಚ್ಚಿನ ಬಂಡವಾಳವಿಲ್ಲದೆ 20 ರಿಂದ 50 ಕುಟುಂಬಗಳನ್ನಿಟ್ಟು ಸ್ವಯಂ ಉದ್ಯೋಗ ಪಡೆಯಬಹುದಾಗಿದೆ.

## ಜೇನು ಸಾಕಾಣಿಕೆಗೆ ಬೇಕಾಗುವ ಸಾಧನ ಸಲಕರಣೆಗಳು ಯಾವುವು?

### ಜೇನು ಪೆಟ್ಟಿಗೆ :

ಮಡಕೆ ಮಾಡುವವನಿಗೆ ಮಣ್ಣು ಮೊದಲು ಹಾಗೆ ಜೇನು ಸಾಕಬೇಕೆಂದರೆ ಮೊದಲು ಒಂದು ಜೇನು ಪೆಟ್ಟಿಗೆ ಬೇಕು. ಅವನ್ನಿರಿಸಲು ಒಂದು ಪುಟ್ಟ ಜಾಗ ಅದನ್ನು ಸ್ಥಾಪಿಸಲು ಒಂದು ನಿಲುವು ಬೇಕಾಗುತ್ತದೆ.

### ಜೇನು ಕುಟುಂಬ :

ಸಾಕಲು ಬರುವ ತಳಿ ಎಂದರೆ **"ಕುಡುವ"** ಜೇನು ಸಾಮಾನ್ಯವಾಗಿ ಹುತ್ತ, ಪೊಟರೆ, ಕಲ್ಲು ಸಂದುಗಳಲ್ಲಿ ಇರುತ್ತದೆ. ಅವನ್ನು ಪೆಟ್ಟಿಗೆಗೆ ವರ್ಗಾಯಿಸಬಹುದು ಅಥವಾ ಈಗಾಗಲೇ ಜೇನು ಸಾಕಾಣಿಕೆ ಮಾಡುವವರಿಂದ ಕೊಳ್ಳಬಹುದು.

### ಜೇನು ತೆಗೆಯುವ ಯಂತ್ರ :

ಇದೊಂದು ಇರಲೇಬೇಕು, ಇಲ್ಲವಾದರೆ ಅನ್ಯರನ್ನು ಆಶ್ರಯಿಸಬೇಕಾಗುತ್ತದೆ. ಜೇನು ಸಾಕಾಣಿಕೆ ಮಾಡಬಯಸುವವರು ಅನಿವಾರ್ಯವಾಗಿ ಈ ಯಂತ್ರವನ್ನು ಹೊಂದಬೇಕು.

### ಮುಖ ಪರದೆ :

ಆರಂಭಿಕರು ಚುಚ್ಚುವ ಭಯದಿಂದ ಹೊರಬರುವವರೆಗೆ ಮುಖ ಪರದೆಯನ್ನು ಉಪಯೋಗಿಸಬಹುದು.

### ಜೇನು ಸಾಕಾಣಿಕೆ ತರಬೇತಿ :

ಇದೊಂದು ವಿಶಿಷ್ಟ ವೃತ್ತಿ, ಬಡಗಿ, ಕಮ್ಮಾರ, ಗಾರೆಗಾರ, ನೇಗಿಲಯೋಗಿ ಇತರರು ತಮ್ಮ ಕಸುಬನ್ನು ಕಲಿಯುವಾಗ ತುಂಬಾ ಸಮಯ ಸಹಾಯಕರಾಗಿ ದುಡಿದು ಪರಿಣಿತಿಗಳಿಸಬೇಕಾಗುತ್ತದೆ. ಈ ವೃತ್ತಿಯಲ್ಲಿ ಎರಡು ಕುಟುಂಬಗಳಿಂದ ಅರಂಭಿಸಿ ಚುಚ್ಚುವ ಭಯದಿಂದ ಹೊರಬಂದರೆ ಮುಗಿಯಿತು. ಅನುಭವಿಗರು ದೊರೆತರೆ ತುಂಬಾ ಸುಲಭವಾಗಿ ಕಲಿಯಬಹುದು.

### ಜೇನು ಸಾಕಾಣಿಕೆ ಆರಂಭ ಹೇಗೆ?

ನಿಮ್ಮ ಸಮೀಪದ ಜೇನು ಕೃಷಿಕರ ಬಳಿಗೆ ಹೋಗಿ ಇಡೀ ದಿನ ಜೇನು ಸಾಕಾಣಿಕೆಯ ಬಗ್ಗೆ ಸಂಕ್ಷಿಪ್ತ ಮಾಹಿತಿ ಪಡೆಯಿರಿ. ಸಂಜೆಯಾದ ಮೇಲೆ ಎರಡು ಜೇನು ಕುಟುಂಬಗಳನ್ನು ಒಯ್ದು ನಿಮ್ಮ ಜಾಗದಲ್ಲಿ ಸ್ಥಾಪಿಸಿರಿ, ಗಮನಿಸಿರಿ.

1. ಒಮ್ಮೆ ಒಂದು ಜಾಗದಲ್ಲಿ ಸ್ಥಾಪಿಸಿದ ಮೇಲೆ ಜಾಗ ಬದಲಿಸಬಾರದು, ಮುಕ್ತವಾಗಿ ಹೋಗಿ ಬರಲು ಅವಕಾಶ ಇರುವ ನೆರಳಿರುವ ಜಾಗದಲ್ಲಿ ಸ್ಥಾಪಿಸಿರಿ. ಎರಡರ ಮಧ್ಯೆ 5 ರಿಂದ 10 ಅಡಿ ಅಂತರ ಇರಲಿ.

– ಮುಂದಿನ ಪುಟಕ್ಕೆ...

–ಹಿಂದಿನ ಪುಟದಿಂದ...

2. ಸೂಕ್ತ ನಿಲುವಿನ ಮೇಲಿರಿಸಿ ಇರುವೆ ಬರದಂತೆ ತಕ್ಕ ಏರ್ಪಾಟು ಮಾಡಿ, ನಿಲುವಿನ ಸುತ್ತಲೂ ಒಲೆಯ ಬೂದಿ ಹಾಕುವುದು ಒಳ್ಳೆಯ ಉಪಾಯ.

3. ವಾರಕ್ಕೆ ಎರಡು ಸಲ ಕೃತಕ (ಸಕ್ಕರೆ ದ್ರಾವಣ) ಆಹಾರ ಕೊಡಿ.

4. ಖಾಲಿ ಸಂಸಾರ ಕೋಣೆ ಚೌಕಟ್ಟುಗಳಿಗೆ ಮೇಣದ ಬುನಾದಿಯ ತುಂಡುಗಳನ್ನು ಹಚ್ಚಿ ಅವುಗಳನ್ನು ಬೆಳೆಸಿದಂತೆ ಜಾಗ ಬದಲಿಸಿ ಮಧ್ಯಕ್ಕೆ ಹಾಕಿ.

5. 4 ರಿಂದ 6 ವಾರದಲ್ಲಿ ಎಲ್ಲ ಸಂಸಾರ ಕೋಣೆಯ ಚೌಕಟ್ಟುಗಳು ಮರಿಹುಟ್ಟುಗಳಿಂದ ತುಂಬಿಹೋಗುತ್ತೆ.

6. ಈ ಅವಧಿಯಲ್ಲಿ ರಾಣಿ, ಮೊಟ್ಟೆ, ಮರಿ, ಕೋಶ, ಗಂಡು ಕೆಲಸಗಾರ್ತಿಗಳನ್ನು ಪರಿಶೀಲಿಸಿ ಜೇನುತುಪ್ಪ ಮತ್ತು ಪರಾಗಗಳ ಸಂಗ್ರಹ ಮಾಡುವುದನ್ನು ಕಲಿಯಿರಿ.

7. ಕುಟುಂಬ ತುಂಬಿ ಹೋಗಿ ಸಂಸಾರ ಚೌಕಟ್ಟುಗಳ ಮೇಲೆ ಕಮಾನು ಆಕಾರದ ಹುಟ್ಟುಗಳು ರಚನೆಯಾಗಿರುವುದನ್ನು ಗಮನಿಸಿ, ಇದೀಗ ಜೇನು ಸಂಗ್ರಹಕ್ಕೆ ಏರ್ಪಾಟು ಮಾಡುವ ಕಾಲ.

8. ಎರಡು ರೀತಿಯಲ್ಲಿ ಜೇನು ಸಂಗ್ರಹಣೆಗೆ ಏರ್ಪಾಟು ಮಾಡಬಹುದು –

ಅ) ಮೇಲೆದ್ದ ಕಮಾನು ಹುಟ್ಟುಗಳು ಮತ್ತು ಎರಡು ಬದಿಯ ಜೇನು ತುಂಬಿದ ಹುಟ್ಟುಗಳನ್ನು ತುಂಡುಮಾಡಿ ಜೇನು ಕೋಣೆ ಚೌಕಟ್ಟುಗಳಿಗೆ ಹೊಂದಿಸುವುದು ಅಥವಾ

ಆ) ಮೇಣದ ಏರಿ ಬುನಾದಿಯನ್ನು ಜೋಡಿಸುವುದು, ಸಾಧ್ಯವಿದ್ದಷ್ಟು ಮಿಶ್ರ ಮಾಡಬೇಡಿ.

# ಅಭಿನಂದನೆಗಳು



**ಶ್ರೀ.ಸಿ.ಜಯರಾಂ,**
ಭಾ.ಅ.ಸೇ(ನಿ)
ಅಧ್ಯಕ್ಷರು,
ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ಬೆಂಗಳೂರು

**ಶುಭ ಕೋರುವವರು**
**ಆಡಳಿತ ಮಂಡಳಿ**
**ಕೃಷಿ ಅರಣ್ಯ ರೈತರ ಮತ್ತು ತಂತ್ರಜ್ಞರ ಸಂಸ್ಥೆ(ನೊ)**

ಶ್ರೀ.ಸಿ.ಜಯರಾಂ ರವರು 1985 ನೇ ಇಸವಿಯಲ್ಲಿ ಭಾರತೀಯ ಅರಣ್ಯ ಸೇವೆಗೆ ಸೇರ್ಪಡೆಯಾಗಿ, ವಿವಿಧ ಹಂತಗಳಲ್ಲಿ ಸರ್ಕಾರಿ ಸೇವೆಯಲ್ಲಿ ಸಲ್ಲಿಸಿದ ಇವರು ಬಂಡೀಪುರ ಅರಣ್ಯ ಬೆಂಕಿ ಬಿದ್ದಾಗ, ತಕ್ಷಣವೇ ತೆಗೆದುಕೊಂಡ ಕ್ರಮ ಶ್ಲಾಘನೀಯ. ತಮ್ಮ ಪಾರದರ್ಶಕ ಆಡಳಿತ ಮತ್ತು ನಿಸ್ವಾರ್ಥ ಸೇವೆ ಎಲ್ಲರ ಮೆಚ್ಚುಗೆಯನ್ನು ಗಳಿಸಿತ್ತು, ಶ್ರೀ.ಸಿ.ಜಯರಾಂ ರವರ ಸೇವೆಯನ್ನು ಗುರುತಿಸಿ ರಾಜ್ಯ ಸರ್ಕಾರ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ಅಧ್ಯಕ್ಷರನ್ನಾಗಿ ನೇಮಿಸಿದೆ. ಆತ್ಮೀಯ ಅಭಿನಂದನೆಗಳು

9. ಜೇನು ತುಂಬಿ ಮೇಣದಿಂದ ಮುದ್ರಿತವಾದ ಮೇಲೆ ಜೇನು ತೆಗೆಯಿರಿ. ಬಟ್ಟೆಯಲ್ಲಿ ಶೋಧಿಸಿ ಸರಿಯಾದ ಸಂಗ್ರಹಣ ಡಬ್ಬಿಯಲ್ಲಿ ಸಂಗ್ರಹಿಸಿಟ್ಟುಕೊಳ್ಳಿ.

## III. ಕುಟುಂಬ ವಿಭಜನೆ– ಸಂಖ್ಯಾಬಲ ಹೆಚ್ಚಿಸುವುದು.

ನಿಮ್ಮ ಜೇನು ಕುಟುಂಬ ಈಗ ವಿಭಜಿಸಲು ಸಿದ್ಧವಿದೆ. ಖಾಲಿ ಪೆಟ್ಟಿಗೆಗಳನ್ನು ಜೋಡಿಸಿಕೊಳ್ಳಿ, ಒಂದು ಕುಟುಂಬವನ್ನು ವಿಭಜನೆ ಮಾಡಿ, ವಿಭಜನೆ ಮಾಡಿದ 9 ನೆಯ ದಿನ ರಾಣಿರಹಿತ ಕುಟುಂಬದಲ್ಲಿರುವ ರಾಣಿ ಕಣಗಳನ್ನು ಗಮನಿಸಿ ಅವುಗಳ ಸಂಖ್ಯೆ ಮತ್ತು ತಲಾ ದೊರೆಯುವ 3 ರಿಂದ ಮರಿಹುಟ್ಟುಗಳನ್ನು ಜೋಡಿಸಿ ಹೊಸ ಕುಟುಂಬಗಳನ್ನು ಸಿದ್ಧಪಡಿಸಿ.

## IV. ವಲಸೆಯೆದ್ದ/ವಲಸೆ ಬಂದ/ಗೂಡು ಬಿಟ್ಟ ಕುಟುಂಬಗಳನ್ನು ಮತ್ತೆ ಪೆಟ್ಟಿಗೆಗೆ ಸೇರಿಸುವುದು.

1. ವಿಭಜನೆ ಮಾಡಿದಾಗ/ತಾನೇ ವಿಭಜನೆಗೊಂಡಾಗ ರಾಣಿಯೊಡಗೂಡಿದ ಸಮರ್ಪಕವಾದ ಗುಂಪು ಸನಿಹದಲ್ಲಿ ಠಿಕಾಣಿ ಹೂಡುತ್ತೆ. ಯಾವ ಗೂಡಿನಿಂದ ಹೊರಬಂದಿದ್ದು ತಿಳಿದರೆ ಅದೇ ಗೂಡಿನ ಒಂದು ಸಂಸಾರ ಹುಟ್ಟನ್ನು ತೆಗೆದು ಖಾಲಿ ಪೆಟ್ಟಿಗೆಯಲ್ಲಿರಿಸಿ ತಳ ಮುಚ್ಚಳ ತೆಗೆದು ಮೇಲೊಂದು ವಸ್ತ್ರ ಹಾಕಿ ಗುಂಪಿನ ಮೇಲೆ ಹಿಡಿದು ಗುಂಪನ್ನು ಮೆಲ್ಲಗೆ ಒತ್ತಿರಿ, ಎಲ್ಲ ಗುಂಪು 2–3 ನಿಮಿಷದಲ್ಲಿ ಒಳಸೇರುತ್ತದೆ. ಒಯ್ದು ಬೇಕಾದ ಜಾಗದಲ್ಲಿ ಸ್ಥಾಪಿಸಿ.

2. ವಲಸೆ ಬಂದ ಗುಂಪನ್ನು ಒಳ ಸೇರಿಸಲು ಯಾವುದಾದರು ಕುಟುಂಬದ ಜೇನ್ನೋಣರಹಿತವಾದ ಮರಿ ಹುಟ್ಟನ್ನು ಬಳಸಿ.

3. ಗೃಹ ತ್ಯಾಗದ ಸಂದರ್ಭದಲ್ಲಿ ತೊಳೆದ ಹೊಸಪೆಟ್ಟಿಗೆ ಮತ್ತು ಬೇರೆಯದೇ ಕುಟ್ಟುಂಬದ ಹುಟ್ಟನ್ನು ಉಪಯೋಗಿಸಿ.

## V. ಸಮರ್ಪಕವಾಗಿ ತನಿಖೆ ಮಾಡುವುದು.

ಪರಾವಲಂಬಿ ಕೀಟ/ರೋಗ ಇತರೆ ಬಾಧೆಗಳನ್ನು ಗುರುತಿಸಿ ಬರದಂತೆ ಮುನ್ನೆಚ್ಚರಿಕೆ ವಹಿಸಿ, ಬಂದಾಗ ನಿವಾರಿಸುವುದನ್ನು ಕಲಿಯಿರಿ. ವ್ಯರ್ಥವಾದ ಹುಟ್ಟುಗಳನ್ನು ಹೆರೆದ ಮೇಣದ ಪುಡಿಯಿಂದ ಶುದ್ದ ಮೇಣ ತಯಾರಿಸುವುದನ್ನು ಕಲಿಯಿರಿ. ಗುರುಗಳ ಸಲಹೆ, ಸಹಾಯ, ಮಾರ್ಗದರ್ಶನ ಪಡೆಯಿರಿ. ನೀವೇ ಗುರುಗಳಾಗಿ ಜೇನು ಹೊಳೆ ಹರಿಸಿರಿ.

**ಮೇ 20 – ವಿಶ್ವ ಜೇನು ದಿನಾಚರಣೆ ಜೇನು ಸಾಕಿ ಜೀವ ಉಳಿಸಿ**

♦

ಬೆಳಿಗ್ಗೆ ಮಾಡಿದ ಅಡಿಗೆ ಮತ್ತು ಆಹಾರವು ಹಳಸಿಹೋಗುತ್ತದೆ. ಹೀಗಿರುವಾಗ, ಅದೇ ಅನ್ನ ರಸದಿಂದ ಬೆಳೆದು ಬಂದ ಈ ಶರೀರ ಹೇಗೆ ನಿತ್ಯವಾದೀತು. –ಗರುಡ ಪುರಾಣ

# ಕೃಷಿ ಅರಣ್ಯ ರೈತರ ಮತ್ತು ತಂತ್ರಜ್ಞರ ಸಂಸ್ಥೆ(ನೊ) ಆಡಳಿತ ಮಂಡಳಿ



ಶ್ರೀ ದೀಪಕ್ ಶರ್ಮಾ
ಅಧ್ಯಕ್ಷರು
ದೂ: 9986232094



ಶ್ರೀ ಎನ್. ಸಂಪಂಗಿ
ಸಹ–ಅಧ್ಯಕ್ಷರು
ದೂ: 9980294242



ಶ್ರೀ ಆರ್.ಎಮ್. ಪಾಲಣ್ಣ
ಉಪಾಧ್ಯಕ್ಷರು
ದೂ: 9945015617



ಶ್ರೀ ಎ.ಎಂ. ಅಣ್ಣಯ್ಯ
ಕಾರ್ಯದರ್ಶಿ
ದೂ: 998019306



ಡಾ.ಎಮ್.ಮಹದೇವ ಮೂರ್ತಿ,
ಸಹ–ಕಾರ್ಯದರ್ಶಿ
ದೂ: 9845588203



ಶ್ರೀ ಕೆ.ಎಸ್. ಆನಂದ್,
ಖಜಾಂಚಿ
ದೂ: 9448943995



ಡಾ. ಎಮ್. ಮಹಾದೇವಪ್ಪ
ಸದಸ್ಯರು
ದೂ: 9448360991



ಶ್ರೀ ಎನ್.ಡಿ ತಿವಾರಿ,
ಸದಸ್ಯರು
ದೂ: 9448360161



ಶ್ರೀ ಬಿ. ಶಿವನಗೌಡ
ಸದಸ್ಯರು
ದೂ: 9448124087



ಶ್ರೀ ನಾಗರಾಜ
ಸದಸ್ಯರು
ದೂ: 9448356095



ಶ್ರೀ ಸಿದ್ದೇಗೌಡ,
ಸದಸ್ಯರು
ದೂ: 9449244323



ಶ್ರೀ ಎಸ್. ನಾರಾಯಣ ಸ್ವಾಮಿ,
ಸದಸ್ಯರು
ದೂ: 9880042155



ಶ್ರೀ ಬಿ.ಎಸ್. ರಘುನಾಥ,
ಸದಸ್ಯರು
ದೂ: 9945003993



ಡಾ|| ಎನ್. ಸ್ವಾಮಿ ರಾವ್,
ಸಹ ಸದಸ್ಯರು
ದೂ: 9880101200



ಶ್ರೀಮತಿ ಶೋಭ. ಎಚ್.ಜಿ,
ಸಹ ಸದಸ್ಯರು
ದೂ: 9448945367

# KRUSHI VANA

## ಕೃಷಿ ಅರಣ್ಯ ರೈತರ ಮತ್ತು ತಂತ್ರಜ್ಞರ ಸಂಸ್ಥೆ(ನೊ) ನಡೆಸಿದ ವಿವಿಧ ಚಟುವಟಿಕೆಗಳ ಚಿತ್ರಗುಚ್ಛ



ವಿಳಾಸ : "ಕೃಷಿವನ" ತ್ರೈಮಾಸಿಕ ಪತ್ರಿಕೆ, ಕೃಷಿ ಅರಣ್ಯ ರೈತರ ಮತ್ತು ತಂತ್ರಜ್ಞರ ಸಂಸ್ಥೆ(ನೊ) ವನವಿಕಾಸ, ನೆಲಮಹಡಿ, 18ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು–560003 ದೂ: 080 23566126 Email: iaftbangalore@gmail.com